International Journal of Applied Research 2019; 5(5): 31-39




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2019; 5(5): 31-39
www.allresearchjournal.com
Received: 19-03-2019
Accepted: 20-04-2019

**ಆನಂದ ಎಸ**
ಸಂಶೋಧನಾ ವಿದ್ಯಾರ್ಥಿ,
ಸ್ನಾತಕೋತ್ತರ ರಾಜ್ಯಶಾಸ್ತ್ರ
ಅಧ್ಯಯನ ಮತ್ತು ಸಂಶೋಧನಾ
ವಿಭಾಗ, ಕುವೆಂಪು
ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ, ಕರ್ನಾಟಕ,
ಭಾರತ

**ಡಾ. ಎಸ್.ಎ. ಜಾವೀದ್**
ಪ್ರಾಧ್ಯಾಪಕರು,ಸ್ನಾತಕೋತ್ತರ
ರಾಜ್ಯಶಾಸ್ತ್ರ ಅಧ್ಯಯನ ಮತ್ತು
ಸಂಶೋಧನಾ ವಿಭಾಗ, ಕುವೆಂಪು
ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ, ಕರ್ನಾಟಕ,
ಭಾರತ

**Correspondence**
**ಆನಂದ ಎಸ**
ಸಂಶೋಧನಾ ವಿದ್ಯಾರ್ಥಿ,
ಸ್ನಾತಕೋತ್ತರ ರಾಜ್ಯಶಾಸ್ತ್ರ
ಅಧ್ಯಯನ ಮತ್ತು ಸಂಶೋಧನಾ
ವಿಭಾಗ, ಕುವೆಂಪು
ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ, ಕರ್ನಾಟಕ,
ಭಾರತ

# ಮಹಾತ್ಮಗಾಂಧಿ ನರೇಗಾ ಯೋಜನೆ ಮತ್ತು ವಾಸ್ತವತೆಯ ಚಿತ್ರಣ– ಒಂದು ಸೈದ್ಧಾಂತಿಕ ಪಕ್ಷಿನೋಟ

**ಆನಂದ ಎಸ, ಡಾ. ಎಸ್.ಎ. ಜಾವೀದ್**

**ಸಾರಾಂಶ:–** ವಿಶ್ವದಾದ್ಯಂತ ಎಲ್ಲಾ ರಾಷ್ಟ್ರಗಳು ಕಲ್ಯಾಣರಾಜ್ಯ ಪರಿಕಲ್ಪನೆಯ ಮುಖಾಂತರ ಆಧುನಿಕತೆ ಮತ್ತು ಅಭಿವೃದ್ಧಿಯನ್ನು ಸಾಧಿಸತೊಡಗಿವೆ. ಭಾರತದಂತಹ ಸ್ವತಂತ್ರ ರಾಷ್ಟ್ರವು ತನ್ನದೆ ಆದಂತಹ ಯೋಜನೆಗಳ ಮುಖೇನ ಅಭಿವೃದ್ಧಿಯನ್ನು ಕಾಣಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದು, ಆದರೆ ಭಾರತದಂತಹ ಸ್ವತಂತ್ರ ರಾಷ್ಟ್ರವು ಸಹ ತನ್ನದೆ ಆದಂತಹ ಯೋಜನೆಗಳ ಮಖೇನ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತಿರುವು ಕಾಣಬಹುದು. ಆದರೆ ಕ್ಷಿಪ್ರಗತಿಯಲ್ಲಿ ಅಭಿವೃದ್ಧಿ ಸಾಧಿಸಲು ನೂರೆಂಟು ಅಡೆ ತಡೆಗಳನ್ನು ನೋಡಬಹುದು, ಹಾಗೆಯೇ ಅದಕ್ಕೆ ವೈಜ್ಞಾನಿಕ ಸತ್ಯಾಸತ್ಯತೆಗಳನ್ನು ಸಹ ಸಂಶೋಧನೆಗಳ ಮುಖೇನ ಗುರುತಿಸುವುದು ಸಹ ಅಷ್ಟೇ ಅನಿವಾರ್ಯವಾಗಿದೆ. ಅದಕ್ಕಾಗಿಯೇ ಭಾರತದಾದ್ಯಂತ ಹೆಚ್ಚು ಪ್ರಾಧಾನ್ಯತೆ ಮತ್ತು ಜನಪ್ರಿಯತೆಯ ಯೋಜನೆಯೆಂದೆ ಗುರುತಿಸಿಕೊಂಡಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಎಷ್ಠರ ಮಟ್ಟಿಗೆ ನಿರುದ್ಯೋಗ ಪ್ರಮಾಣವನ್ನು ಕಡಿಮೆ ಮಾಡಿದೆ ಹಾಗೂ ವಾಸ್ತವವಾಗಿ ಜನರು ನೇರವಾಗಿ ಭಾಗಿಯಾಗಿದ್ದಾರೆಯೇ ಎಂಬುದನ್ನು ಫಲಾನುಭವಿಗಳು ಮತ್ತು ಫಲಾನುಭವಿಗಳಲ್ಲದವರ ಸಂದರ್ಶನದ ಮುಖಾಂತರ ತಿಳಿಯುವ ಪ್ರಯತ್ನ ಮಾಡಲಾಗಿದೆ. ಈ ಪತ್ರಿಕೆಯಲ್ಲಿ ಈ ಎಲ್ಲಾ ಪ್ರತಿಕ್ರಿಯೆಗಳ ಜೊತೆಗೆ ಸೈದ್ಧಾಂತಿಕ ಚೌಕಟ್ಟನ್ನು ವಿವರಿಸಿ ರಾಷ್ಟ್ರ ರಾಜ್ಯದ ಪರಿಕಲ್ಪನೆಯೇ ಇಲ್ಲದಂತಹ ರಾಷ್ಟ್ರದಲ್ಲಿ ಯೋಜನೆಗಳು ಪೂರ್ಣ ಫಲಿತಾಂಶ ಕೊಡಲು ಸಾಧ್ಯವೇ ಎಂಬುದನ್ನು ಆಧಾರ ಸಹಿತವಾಗಿ ಒದಗಿಸುವಂತ ಕಾರ್ಯ ಮಾಡಲಾಗಿದೆ. ಹಾಗೆಯೆ ಭ್ರಷ್ಟಾಚಾರದ ಸ್ವರೂಪವನ್ನು ಸಹ ಗ್ರಹಿಸಲಾಗಿದೆ.

**ಕೀಲಿಪದಗಳು:–** ಮಹಾತ್ಮಗಾಂಧಿ ನರೇಗಾ, ಕಲ್ಯಾಣರಾಜ್ಯ, ಆಧುನಿಕ ಅಭಿವೃದ್ಧಿ, ರಾಷ್ಟ್ರ ರಾಜ್ಯ, ನಿರುದ್ಯೋಗ, ಭ್ರಷ್ಟಾಚಾರ.

**ಪೀಠಿಕೆ:–**

ಭಾರತದಂತಹ ದೊಡ್ಡ ರಾಷ್ಟ್ರಗಳು ಅಭಿವೃದ್ಧಿಯನ್ನು ಕಾಣಬೇಕಾದರೆ ಉದ್ಯೋಗ ಎನ್ನುವುದು ಎಲ್ಲರಿಗೂ ಮೂಲಭೂತ ಅವಶ್ಯಕತೆಗಳಲ್ಲಿ ಒಂದೆನಿಸುತ್ತದೆ. ಸ್ವತಂತ್ರ ಭಾರತ ಕಲ್ಯಾಣ ರಾಜ್ಯದ ಪರಿಕಲ್ಪನೆಯನ್ನು ಸಫಲಗೊಳಿಸಿಕೊಳ್ಳಬೇಕಾದರೆ ಯೋಜನೆಗಳನ್ನು ಸಮಗ್ರವಾಗಿ ರಾಷ್ಟ್ರದಾದ್ಯಂತ ವ್ಯಾಪಕವಾಗಿ ಬಿತ್ತರಿಸುವುದು ಅನಿವಾರ್ಯ ಹಾಗೂ ಅವಶ್ಯಕವೂ ಸಹ ಆಗಿದೆ. ನಿರುದ್ಯೋಗ ಸಮಸ್ಯೆ ಎಂಬುದು ಇಂದು ರಾಷ್ಟ್ರೀಯ ಸಮಸ್ಯೆ ಎಂದು ಗುರುತಿಸಿಕೊಂಡಿರುವುದು ಅಭಿವೃದ್ಧಿಶೀಲ ರಾಷ್ಟ್ರವಾದ ಭಾರತಕ್ಕೆ ಒಂದು ತೆರನಾಗಿ ಪ್ರಗತಿ ಹೊಂದಿದ ರಾಷ್ಟ್ರಗಳ ಜೊತೆ ಪೈಪೋಟಿಗೆ ಹಿನ್ನಡೆಯಾಗಿದೆ ಎನ್ನಬಹುದು. ಪ್ರಸ್ತುತ ಭಾರತದಲ್ಲಿ ಸಾಕಷ್ಟು ಯುವಜನತೆಯೇ ಹೆಚ್ಚಿನ ಪ್ರಮಾಣದಲ್ಲಿದ್ದು, ಮಾನವ ಸಂಪನ್ಮೂಲವು ಅಗಾಧ ಪ್ರಮಾಣದಲ್ಲಿರುವುದನ್ನು ಸಹ ಕಾಣಬಹುದು. ಇದಕ್ಕೆ ಪೂರಕವೆಂಬಂತೆ ಸಾಕ್ಷರತೆಯು ಸಹ ಕ್ರಮೇಣ ಹೆಚ್ಚುತ್ತಿದೆ. ಹಾಗೆಯೇ ಭಾರತ ಹೇಗೆ ಒಂದು ಯುವ ರಾಷ್ಟ್ರವು ಅದೇ ರೀತಿ ಹೆಚ್ಚು ಹಳ್ಳಿಗಳಿಂದ ಕೂಡಿದ ರಾಷ್ಟ್ರವೆಂಬುದನ್ನು ಮರೆಯುವಂತಿಲ್ಲ. ಒಂದು ರಾಷ್ಟ್ರದ ಏಳಿಗೆ, ಅಭಿವೃದ್ಧಿಯು ಆ ರಾಷ್ಟ್ರದಲ್ಲಿನ ಸರ್ಕಾರಗಳು ಹೊರಡಿಸುವಂತಹ ಯೋಜನೆಗಳನ್ನು ಅವಲಂಬಿಸಿರುತ್ತದೆ. ಏಕೆಂದರೆ ಪೂರ್ಣ ಪ್ರಮಾಣದಲ್ಲಿ ಪ್ರತಿಯೊಬ್ಬನಿಗೂ ಉದ್ಯೋಗ ದೊರೆತರೆ ಅವನ ಅಭಿವೃದ್ಧಿಯಷ್ಟೇ ಅಲ್ಲದೆ ರಾಷ್ಟ್ರೀಯ ತಲಾದಾಯದ ಮೇಲೂ ಅದರ ಪರಿಣಾಮವಿರುತ್ತದೆ.
ಭಾರತವು ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು ಪ್ರಜೆಗಳ ಯೋಗಕ್ಷೇಮ ಹಾಗೂ ಕಲ್ಯಾಣ ರಾಜ್ಯದ ಗುರಿಯನ್ನು ಹೊಂದಿರುವುದು ನೈಜವಾದ ಸಂಗತಿಯಾಗಿದೆ. ಅದೇ ತೆರನಾಗಿ ಹಳ್ಳಿ ಅಥವಾ

ಗುಡ್ಡಗಾಡು ಪ್ರದೇಶದಲ್ಲಿ ಒಬ್ಬ ಶ್ರೀ ಸಾಮಾನ್ಯನು ಸಹ ಉದ್ಯೋಗದಲ್ಲಿ ತೊಡಗಿಕೊಳ್ಳಬೇಕು ಹಾಗೆಯೇ ಸ್ವಾವಲಂಬಿತನವನ್ನು ಬೆಳೆಸಿಕೊಳ್ಳುವುದರ ಜೊತೆಗೆ ರಾಷ್ಟ್ರದ ಪ್ರಗತಿಯನ್ನು ಸಾಧಿಸಬೇಕೆನ್ನುವ ಉದ್ದೇಶದಿಂದ ಭಾರತ ಸರ್ಕಾರವು ಸ್ವಾತಂತ್ರ್ಯ ನಂತರ ಕಲ್ಯಾಣ ರಾಜ್ಯ ಗುರಿಯನ್ನಾಧರಿಸಿ, ಪಂಚ ವಾರ್ಷಿಕ ಯೋಜನೆಗಳು, ಅಂತರಾಷ್ಟ್ರೀಯ ಸಂಬಂಧ, ವಿದೇಶಾಂಗ ನೀತಿಯ ರಚನೆಯಲ್ಲಿ ತೊಡಗಿತು. ಇದು ಒಂದು ರೀತಿ ರಾಷ್ಟ್ರದ ಬಾಹ್ಯ ವಿಚಾರಗಳಿಗೆ ಪ್ರಾಧಾನ್ಯತೆಯನ್ನು ನೀಡಿದರೆ, ರಾಷ್ಟ್ರವು ತನ್ನ ಆಂತರಿಕ ವ್ಯಾಪ್ತಿಯಲ್ಲಿ ರಾಷ್ಟ್ರದಾದ್ಯಂತ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಶ್ರಮಿಕ ವರ್ಗ ಅಥವಾ ಬಡ ವರ್ಗದ ಜನತೆಯನ್ನು ಮೇಲೆತ್ತುವ ಸಲುವಾಗಿ ಹಲವಾರು ವಸತಿ ಯೋಜನೆಗಳನ್ನು ರಾಷ್ಟ್ರ ಮತ್ತು ರಾಜ್ಯ ಸರ್ಕಾರಗಳೆರಡು ಮಾಡಲು ಮುಂದಾಗಿದ್ದವು ಉದಾಹರಣೆಗೆ ಭಾರತ ಮತ್ತು ಕರ್ನಾಟಕ ಸರ್ಕಾರವನ್ನು ಅವಲೋಕಿಸಿದರೆ ಇಂದಿರಾಗಾಂಧಿ ಆವಾಸ್ ಯೋಜನೆ, ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ, ಆಸರೆ, ಆಶ್ರಯ ಯೋಜನೆ, ಇನ್ನು ಅನೇಕ ಯೋಜನೆಗಳು ಅಳವಡಿಕೆಯಾಗಿರುವುದನ್ನು ಕಾಣಬಹುದು.

ಮೊದಲೆ ತಿಳಿಸಿದ ಹಾಗೇ ಭಾರತ ದೇಶ ಹಳ್ಳಿಗಳಿಂದ ಮತ್ತು ಹೆಚ್ಚು ಯುವ ಜನತೆಯಿಂದ ಕೂಡಿದ ರಾಷ್ಟ್ರ ಕ್ರಮೇಣ ಮುಂದುವರೆದು ಹೇಳುವುದಾದರೆ ಭಾರತವು ಪ್ರಪಂಚದಲ್ಲಿಯೇ ಜನಸಂಖ್ಯೆಯಲ್ಲಿ ಎರಡನೇ ದೊಡ್ಡ ರಾಷ್ಟ್ರವಾಗಿರುವುದು. ಇದನ್ನು ಒಂದು ಧನಾತ್ಮಕ ಅಂಶವಾಗಿ ನೋಡಿದರೆ ಮಾನವ ಸಂಪನ್ಮೂಲ ಹೆತ್ತೇಚ್ಚವಾಗಿ ದೊರೆಯುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇದರ ಋಣಾತ್ಮಕ ಪರಿಣಾಮ ಎನ್ನುವುದು ರಾಷ್ಟ್ರದ ತಲಾದಾಯ ಹಾಗೂ ಉದ್ಯೋಗದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ ಎನ್ನಬಹುದು. ಇಂದು ಭಾರತದಾದ್ಯಂತ ಜನಸಂಖ್ಯೆ ಹೆಚ್ಚಿದಂತೆ ಸಾಕ್ಷರತೆಯ ಪ್ರಮಾಣವು ಸಹ ಅಷ್ಟೇ ಪ್ರಮಾಣದಲ್ಲಿ ಹೆಚ್ಚುತ್ತಿರುವುದು ನಿರುದ್ಯೋಗ ಸಮಸ್ಯೆಯು ತನ್ನ ವ್ಯಾಪ್ತಿಯನ್ನು ವಿಸ್ತರಿಸಲು ಅನುವು ಮಾಡಿಕೊಡುವಂತಿದೆ. ಆದರೆ ಇದನ್ನು ಹೊಗಲಾಡಿಸಲು ಅಥವಾ ತೆರವುಗೊಳಿಸಲು ಭಾರತ ಸರ್ಕಾರವು ಹಲವಾರು ಯೋಜನೆಗಳನ್ನು ಅಳವಡಿಕೆ ಮಾಡಿಕೊಂಡಿರುವುದು ಗಮನಾರ್ಹ ಸಂಗತಿಯಾಗಿದೆ. ಪ್ರಸ್ತುತತೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ, ರಾಷ್ಟ್ರೀಯ ಗ್ರಾಮೀಣ ನಿರುದ್ಯೋಗ ನಿರ್ಮೂಲನೆ, ಜವಾಹರ್ ರೋಜ್‌ಗಾರ್ ಯೋಜನೆಯಂತಹ ಅಂಶಗಳು, ಸರ್ಕಾರದ ನಿಲುವುಗಳು ಭಾರತದಲ್ಲಿನ ಜನತೆಗೆ ಸ್ವಲ್ಪ ಮಟ್ಟಿನ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ತೊಡಗಿಕೊಂಡಿದ್ದಾವೆ. ಪ್ರಸ್ತುತ ಈ ಯೋಜನೆಗಳ ಅನುಷ್ಠಾನವೆಂಬುದು ಎಷ್ಟರ ಮಟ್ಟಿಗೆ ರಾಷ್ಟ್ರದಾದ್ಯಂತ ಯಶಸ್ವಿಯಾಗಿವೆಯೇ ಎಂಬುದನ್ನು ತಿಳಿಯುವುದು ಅತ್ಯಂತ ಅವಶ್ಯಕವಾದ ಅಂಶವಾಗಿದೆ, ಏಕೆಂದರೆ ಇದಕ್ಕೆ ಬಲವಾದ ಕಾರಣ ಭಾರತವು ಸಹ ಪ್ರಪಂಚದ ಭ್ರಷ್ಟಚಾರದ ರಾಷ್ಟ್ರಗಳ ಸಾಲಿನಲ್ಲಿ ಸೇರಿರುವುದೇ ಆಗಿದೆ. ಅಧಿಕಾರಿಗಳು ಯಾವ ರೀತಿಯಲ್ಲಿ ಯೋಜನೆಗಳನ್ನು ರಾಷ್ಟ್ರದ ಜನತೆಯಲ್ಲಿ ಅಳವಡಿಕೆ (Implementation) ಮಾಡುತ್ತಿದ್ದಾರೆ ಹಾಗೆಯೇ ಯೋಜನೆಗಳು ಫಲಪ್ರದವಾಗಿ ನಡೆದುಕೊಂಡು ಹೋಗುತ್ತಿದೆಯೆ ಎಂಬುದನ್ನು ಸಂಶೋಧನೆಯ ಮೂಲಕ ಗಮನ ಹರಿಸುವುದು ಒಂದು ಕಾರ್ಯವಾಗಿದೆ.

ಭಾರತದಲ್ಲಿನ ನಿರುದ್ಯೋಗ ನಿರ್ಮೂಲನೆಗೆ ಹಲವಾರು ಯೋಜನೆಗಳು ಅನುಷ್ಠಾನಗೊಳಿಸಿರುವುದು ತಿಳಿದಿರುವಂತಹ ವಿಚಾರವಾಗಿದೆ. ಇದು ಗ್ರಾಮೀಣ ನಿರುದ್ಯೋಗ ನಿರ್ಮೂಲನೆಯನ್ನು ಅಳವಡಿಕೆಯಾಗಿ ತನ್ನದೆ ಆದ ಛಾಪನ್ನು ಮೂಡಿಸಿರುವ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ" ಯೋಜನೆಯ ಬಗ್ಗೆ ಸಂಶೋಧನೆಯನ್ನು ಕೈಗೊಂಡು ಅದರ ಫಲಿತಾಂಶ ಯಾವ ರೀತಿಯಾಗಿರುವುದೆಂಬುದನ್ನು ಅವಲೋಕಿಸುವುದಾಗಿದೆ. ಅದಕ್ಕಿಂತ ಮುಂಚಿತವಾಗಿ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGA) ಬಗ್ಗೆ ತಿಳಿದುಕೊಳ್ಳುವುದು ಸಹ ಅಗತ್ಯವಾಗಿದೆ. ಹಾಗೆಯೇ ಸಂಶೋಧನೆಯಲ್ಲಿ ಅದರ ಸಾಧಕ–ಬಾಧಕಗಳ ಬಗ್ಗೆ ತಿಳಿಯುವುದು ಇಲ್ಲಿನ ಬಹುಮುಖ್ಯ ಕಾರ್ಯವಾಗಿದೆ ಎನ್ನಬಹುದು.

ಈ ಯೋಜನೆಯು ಸ್ವ– ಇಚ್ಚೆಯಿಂದ ಅರ್ಜಿಸಲ್ಲಿಸುವ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತೀ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ನೂರು ದಿನಗಳ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ಒದಗಿಸುವುದು. ಹಾಗೆಯೇ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದರ ಜೊತೆಗೆ ಗ್ರಾಮೀಣ ಜನರಿಗೆ ದೀರ್ಘಕಾಲದ ಜೀವನೋಪಾಯದ ಮಾರ್ಗಗಳನ್ನು ಬಲಪಡಿಸುವುದು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಮತ್ತು ವಲಸೆ ಹೋಗುವುದನ್ನು ತಪ್ಪಿಸುವುದು ಇದರ ಪ್ರಮುಖತರ ಕಾರ್ಯಗಳಾಗಿದೆ.

**ಸಂಶೋಧನಾ ಅಧ್ಯಯನ ವಿಧಾನಗಳು**

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಪ್ರಮುಖವಾಗಿ ಎರಡು ರೀತಿಯ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದ್ದು ಮೊದಲನೆಯದಾಗಿ ಪ್ರಾಥಮಿಕ ಮೂಲಗಳು ಹಾಗೆಯೇ ಅನುಷಂಗಿಕ ಮೂಲಗಳಿಂದ (Secondary sources) ಮಾಹಿತಿಯನ್ನು ಕಲೆಹಾಕಲಾಗಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಸಮಗ್ರವಾದ ಅಧ್ಯಯನವಾಗಿರುವುದರಿಂದ ಇದರ ವ್ಯಾಪ್ತಿಯೂ ಸಹ ವಿಸ್ತೃತವಾಗಿದೆ. ಆದ್ದರಿಂದ ಇದನ್ನು ದಾವಣಗೆರೆ ಜಿಲ್ಲಾ ವ್ಯಾಪ್ತಿಗೆ ಸಂಕುಚಿತಗೊಳಿಸಿಕೊಳ್ಳಲಾಗಿದೆ. ಹಾಗೆಯೇ ಅನುಷಂಗಿಕ ಮೂಲಗಳಾದ ನಿಯತಕಾಲಿಕೆಗಳು, ದಿನಪತ್ರಿಕೆ, ರಾಜ್ಯಪತ್ರ ಹಾಗೂ ಅನೇಕ ಸಂಶೋಧನಾ ಗ್ರಂಥಗಳು, ಗ್ರಂಥಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಆರು ತಾಲ್ಲೂಕುಗಳಿದ್ದು ಸರಳ ಯಾದೃಚ್ಚಿಕ ನಮೂನೆಯ ಮೂಲಕ (Simple random method) ಮೂಲಕ ಮಾಹಿತಿಯನ್ನು ಕಲೆ ಹಾಕಲಾಗುವುದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಜಿಲ್ಲೆಯ ಮತ್ತು ತಾಲ್ಲೂಕಿನ ಆಯ್ದ ಗ್ರಾಮಗಳಲ್ಲಿನ

- ಫಲಾನುಭವಿಗಳು
- ಖಾಸಗಿ ವ್ಯಕ್ತಿಗಳು (ಫಲಾನುಭವಿಗಳಲ್ಲದ)
- ವೃತ್ತಿ ನಿರತ ವರ್ಗ ( ಪಿ.ಡಿ.ಓ ಮತ್ತು ಕಾರ್ಯದರ್ಶಿ)
- ಜನ ಪ್ರತಿನಿಧಿ ವರ್ಗ (ಅಧ್ಯಕ್ಷ ಮತ್ತು ಸದಸ್ಯರು)

ಈ ನಾಲ್ಕು ವರ್ಗದ ಜನರನ್ನು ಪ್ರಶ್ನಾವಳಿ ಮತ್ತು ಅನುಸೂಚಿಯನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲು ನಿರ್ಧರಿಸಲಾಗಿದೆ.

**ಸಂಶೋಧನಾ ಸಾರಾಂಶ**

ಒಂದು ರಾಷ್ಟ್ರದ ಪ್ರಗತಿಯೆಂಬುದು ಆ ದೇಶದ ಸಾರ್ವಭೌಮತೆಯ ಜೊತೆಗೆ ಕಲ್ಯಾಣ ರಾಜ್ಯದ ಮೂಲಭೂತ ಅಂಶಗಳಿಂದ ಧೃಢೀಕೃತವಾಗುತ್ತದೆ. 21ನೇ ಶತಮಾನದಲ್ಲಿ ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಯೂ ಹಸಿವು, ಬಡತನ, ನಿರುದ್ಯೋಗ, ಉತ್ತಮ ನಾಗರಿಕತ್ವವುಳ್ಳ ಯೋಚನೆಗಳನ್ನು ಬೆಳೆಸಿಕೊಳ್ಳುವಷ್ಟು ಸುಭಿಕ್ಷಾ ವಾತವರಣವನ್ನು ಸೃಷ್ಠಿಯಾಗಬೇಕಿದೆ. ಕಲ್ಯಾಣ ರಾಜ್ಯ ಪರಿಕಲ್ಪನೆಗಳು ದ್ವಿತೀಯ ಮಹಾಯುದ್ಧದ ನಂತರದಲ್ಲಿ ಕ್ಷಿಪ್ರಗತಿಯ ವೇಗದ ಚಾಲನೆಯನ್ನು ಪಡೆದುಕೊಂಡಿದ್ದು, ಗಮನಾರ್ಹ ವಿಚಾರವೆ ಸರಿ, ಹಾಗೆಯೇ ಇಂದಿನ ದಿನಮಾನಗಳಲ್ಲಿ ಇದರ ಅವಶ್ಯಕತೆಯೂ ಸಹ ಅನಿವಾರ್ಯವಾಗಿದೆ. ಒಂದು ದೇಶದ ಅಭಿವೃದ್ಧಿಯೆಂಬುದು ಆ ರಾಷ್ಟ್ರದ ಯೋಜನೆಗಳ ಉತ್ತಮ ಫಲಿತಾಂಶಗಳ ಮೇಲೂ ಸಹ ಅವಲಂಬಿತವಾಗಿರುತ್ತದೆ. ಈ ನಿಟ್ಟಿನಲ್ಲಿ ವಿಶ್ವದಲ್ಲಿಯೇ ಏಳನೆ ದೊಡ್ಡ ರಾಷ್ಟ್ರವೆಂದೆ ಗುರುತಿಸಿಕೊಂಡಿರುವ ಭಾರತವು ಹಲವು ಪ್ರಯತ್ನಗಳನ್ನು ಮಾಡಿರುವುದನ್ನು ಕಾಣಬಹುದು. 1947ಕ್ಕಿಂತ ಮುಂಚಿತವಾಗಿ ಅಭಿವೃದ್ಧಿಯ ಅಂಶಗಳೇ ಇಲ್ಲದಂತಿದ್ದ ಭಾರತ ಕ್ರಮೇಣ ಸ್ವತಂತ್ರ ಪಡೆದ ನಂತರ ಪ್ರಜಾಪ್ರಭುತ್ವದ ಅಡಿಗಲ್ಲಿನ ಮೇಲೆ ತನ್ನದೆ ಆದಂತಹ ನವ ಭಾರತ ನಿರ್ಮಾಣಕ್ಕೆ ಮುಂದಾಗಿದ್ದು, ಇಲ್ಲಿನ ಬಡತನ, ನಿರ್ವಸತಿಕರಣ, ಸ್ವಚ್ಚತೆ ನೈರ್ಮಲ್ಯತೆ, ಹಾಗೂ ಬೃಹತಾಗಿ ಬೆಳೆಯುತ್ತಿರುವ ಜನತೆಗೆ ನಿರುದ್ಯೋಗ ನಿರ್ಮೂಲನೆ ಯೋಜನೆಗಳ ಮೂಲಕ ಉದ್ಯೋಗ ಒದಗಿಸುವಂತಹ ಪ್ರಯತ್ನ ಮಾಡಿರುವುದು ಹಲವು ಯೋಜನೆಗಳ ಮೂಲಕ ಗ್ರಹಿಸಬಹುದಾಗಿದೆ. ಸ್ವತಂತ್ರ ನಂತರದ ದಿನಮಾನಗಳಲ್ಲಿ ಹಲವಾರು ಯೋಜನೆಗಳನ್ನು ಭಾರತ ಸರ್ಕಾರ ಜಾರಿಗೆ ತಂದಿದ್ದು, ಅವುಗಳ ಸಾಧಕ ಬಾಧಕಗಳ ಬಗೆಗೆ ಸಂಶೋಧನೆಯಲ್ಲಿ ತಿಳಿಯಲಾಗಿದೆ. ಭಾರತದಂತಹ ದೊಡ್ಡ ರಾಷ್ಟ್ರಗಳಲ್ಲಿ ಯೋಜನೆಗಳು ಭ್ರಷ್ಟಾಚಾರ ಮುಕ್ತತೆಯಿಂದ ಸಂಪೂರ್ಣ ಸಫಲತೆಯನ್ನು ಕೊಡುವುದು ಕಷ್ಟಸಾಧ್ಯವಾಗಿದೆ. ಭ್ರಷ್ಟಾಚಾರ ಮುಕ್ತವಾಗಿ ಪಾರದರ್ಶಕವಾಗಿ ಯೋಜನೆಗಳ ಫಲಪ್ರದವಾಗಲು ಹಲವಾರು ಸೈದ್ಧಾಂತಿಕ ಕಾರಣಗಳನ್ನು ಸಹ ನೀಡಬಹುದಾಗಿದೆ.

21ನೇ ಶತಮಾನದಲ್ಲಿ ಯೋಜನೆಗಳ ಸಫಲತೆಗೆ ಆಧುನಿಕ ತಂತ್ರಜ್ಞಾನವು ಸಹಕಾರ ನೀಡಿದ್ದು ಇ–ಆಡಳಿತದ ಮೂಲಕ ಕೋಟ್ಯಾಂತರ ರೂ.ಗಳ ಅಧಿಕೃತ ಲೆಕ್ಕ ಪತ್ರಗಳಿಗೆ ಗಣಕೀಕೃತ ವ್ಯವಸ್ಥೆಯು ಸಹಕಾರಿಯಾಗಿದೆ. ಭಾರತದಲ್ಲಿ ಹಲವಾರು ಯೋಜನೆಗಳ ಜಾರಿಯಾಗಿರುವುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಭಾರತ ಸರ್ಕಾರದ ಅಧಿಕೃತ ಯೋಜನೆಯಾಗಿದ್ದು, ಕೇಂದ್ರದಿಂದ ಗ್ರಾಮಮಟ್ಟದಲ್ಲಿನ ನಿರುದ್ಯೋಗ ನಿರ್ಮೂಲನೆಗೆ ಜಾರಿಯಾಗಿದೆ. ಆದರೆ ಇಂದಿನ ದಿನಮಾನಗಳಲ್ಲಿ ಯೋಜನೆ ಎಷ್ಟೇ ಪಾರದರ್ಶಕವಾಗಿ ತಳಮಟ್ಟದಲ್ಲಿ ತಲುಪುತ್ತದೆ ಎಂದರೂ ಭ್ರಷ್ಟಾಚಾರ ಅಂಶಗಳು ಅಡ್ಡಲಾಗಿವೆ. ಅದರ ಜೊತೆಗೆ ನಿರುದ್ಯೋಗ ನಿರ್ಮೂಲನೆಗೆ ಸರ್ಕಾರ ಹೇಳಿರುವ ಯೋಜನೆಯ ಅಂಶಗಳು ಸಫಲವಾಗದೆ ಇರುವುದನ್ನು ಸಂಶೋಧನೆಗಳ ಮೂಲಕ ಗುರುತಿಸಬಹುದಾಗಿದೆ. ಮನುಷ್ಯ ಎಷ್ಟೇ ಪ್ರಗತಿದಾಯಕವಾದಂತಹ ಆಧುನಿಕ ತಂತ್ರಜ್ಞಾನ ಬಳಸಿದರು ನೈತಿಕವಾಗಿ ಬದಲಾಗದೆ ಯೋಜನೆಗಳು ಯಶಸ್ವಿಯಾಗಲು ಸಾಧ್ಯವಿಲ್ಲವಾಗಿದೆ. ಮಹಾತ್ಮಗಾಂಧಿ ನರೇಗಾ ಯೋಜನೆಯೂ ಸಹ ಇದಕ್ಕೆ ಕಾರಣೀಭೂತವಾಗಿದೆ. ಕರ್ನಾಟಕ ರಾಜ್ಯದಲ್ಲಿನ ಮಹಾತ್ಮಗಾಂಧಿ ನರೇಗಾ ಯೋಜನೆಯೂ ಎಷ್ಟರಮಟ್ಟಿಗೆ ಫಲಪ್ರದತೆಯನ್ನು ನೀಡಿದೆ ಎಂಬುದನ್ನು ಅಂಕಿ ಸಂಖ್ಯೆಗಳ ಆಧಾರಿತವಾಗಿ ಮತ್ತು ಕ್ಷೇತ್ರ ಕಾರ್ಯದ ಅಧ್ಯಯನದ ಮೂಲಕ ತಿಳಿಸುವಂತಹ ಕಾರ್ಯ ಮಾಡಲಾಗಿದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾರ್ಯಕ್ರಮಗಳು ಆಯ್ದು ಕೊಂಡಂತಹ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಜಾರಿಗೊಂಡಿವೆ, ಹಾಗೂಇನ್ನು ಚಾಲನೆರಹಿತವಾಗಿವೆ. ಆದರೆ ವಾಸ್ತವವಾಗಿ ಯೋಜನೆಯ ಉದ್ದೇಶ ಗ್ರಾಮೀಣ ಭಾಗದ ಜನರಿಗೆ ದಿನಗೂಲಿ ಮುಖೇನ ಕಾಮಗಾರಿಗಳಲ್ಲಿ ಉದ್ಯೋಗ ಒದಗಿಸುವಂತದ್ದು ಸಂಪೂರ್ಣ ವಿಫಲತೆಯನ್ನು ಕಂಡಿದೆ. ಇಂದಿನ ಆಧುನಿಕ ತಂತ್ರಜ್ಞಾನ ಗಣಕ ಯಂತ್ರದ ಮೂಲಕ ಲೆಕ್ಕ ಪತ್ರಗಳನ್ನು ಹಾಗೂ ಕಾಮಗಾರಿಗಳ ಸಮಗ್ರ ವಿವರಗಳನ್ನು ನೀಡಿದರೂ ಸಹ ಅದು ಅಷ್ಟಕ್ಕೆ ಸೀಮಿತವಾಗಿದೆ. ವಾಸ್ತವದಲ್ಲಿ ಶೇಕಡಾ ನೂರರಲ್ಲಿ ಕೇವಲ 20% ಜನಗಳು ಉದ್ಯೋಗ ಮಾತ್ರ ಪಾಲ್ಗೊಳ್ಳುತ್ತಾರೆಯೇ ಹೊರತು ಇನ್ನುಳಿದಂತೆ ಎಲ್ಲಾ ಕಾಮಗಾರಿಗಳನ್ನು ಯಂತ್ರಗಳ ಮುಖೇನವೇ ಮಾಡಿಸಲಾಗುತ್ತದೆ. ಜನಗಳು ಸಹ ಇದಕ್ಕೆ ಪೂರಕ ವಾತಾವರಣವನ್ನೆ ರಚಿಸಿಕೊಂಡಿದ್ದು ಎರಡು ಕಡೆಯಿಂದಲೂ ಈ ರೀತಿಯ ಭ್ರಷ್ಟಾಚಾರತೆಗೆ ಅನುಕೂಲಕರವಾದ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಯಾವುದೇ ಕಾಮಗಾರಿಗಳ ಚಾಲನೆ ಅಧಿಕೃತವಾಗಿ ಆದೇಶ ಸಿಕ್ಕನಂತರ ಕೇವಲ ಛಾಯಚಿತ್ರಕ್ಕಾಗಿ ಜನರನ್ನು ಒಂದು ದಿನದ ಮಟ್ಟಿಗೆ ಕರೆಸಿಕೊಂಡು ಆ ನಂತರದ ದಿನಗಳಲ್ಲಿ ಬೃಹತ್ ಯಂತ್ರಗಳ ಮೂಲಕ ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತದೆ. ಆದರೆ 15 ರಿಂದ 20 ದಿನಗಳವರೆಗೆ ಸ್ವತಃ ಜನರಿಂದಲೆ ನಡೆಯುತ್ತಿವೆ ಎಂಬುದಾಗಿ ವರದಿಯನ್ನು ಸಲ್ಲಿಸಲಾಗುತ್ತದೆ. ಆ ನಂತರ ಕೂಲಿ ವೇತನ ಬಂದಂತಹ ಸಂದರ್ಭದಲ್ಲಿ ಎಲ್ಲಾ ಜನರ ಅಂದರೆ ಕಾಮಗಾರಿಗೆ ಬೇಕಾಗುವಷ್ಟು ಜನರ ಬ್ಯಾಂಕ್ ಖಾತೆಯನ್ನು ಇರಿಸಿಕೊಂಡು ಅವರ ಖಾತೆಗೆ ಜಮೆ ಮಾಡಲಾಗುತ್ತದೆ.

ಜನರು ಯಾವುದೆ ಕಾಮಗಾರಿಯಲ್ಲಿ ಪಾಲ್ಗೊಳ್ಳದೇ ಇರುವುದರಿಂದ ಮಹಾತ್ಮಗಾಂಧಿ ನರೇಗಾ ಯೋಜನೆಯಿಂದ ಬಂದಂತಹ ಹಣದಲ್ಲಿ ಪಂಚಾಯಿತಿ ಅಧಿಕಾರಿಗಳು ಹಾಗೂ ಇತರ ಪ್ರತಿನಿಧಿ ವರ್ಗಕ್ಕೆ ಇಂತಿಷ್ಟು ಹಣವೆಂಬುದನ್ನು ತೆಗೆದುಕೊಳ್ಳುವಂತಹದು ಕಾಣಬಹುದು. ಯಾವುದೇ ಒಬ್ಬ ವ್ಯಕ್ತಿಯೂ ಬ್ಯಾಂಕ್ ಖಾತೆಗೆ ಬಂದಂತಹ ಹಣದಲ್ಲಿ ಅಧಿಕಾರಿ ವರ್ಗ ಮತ್ತು ಪ್ರತಿನಿಧಿ ವರ್ಗಕ್ಕೆ ನೀಡದೆ ಇದ್ದಲ್ಲಿ ಮುಂದಿನ ಕಾಮಗಾರಿಗಳಲ್ಲಿ ಸೇರಿಸುವುದಿಲ್ಲ ಅದ್ದರಿಂದ ಯಾವುದೆ ಕೆಲಸಕ್ಕೆ ಹೋಗದಿದ್ದರೂ ಹಣ ಸಿಗುತ್ತೇ ಎಂಬ ಉದ್ದೇಶದಿಂದ ಬಂದಂತಹ ಹಣದಲ್ಲಿ ಹಂಚಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಇಂತಹ ವ್ಯವಸ್ಥೆಯನ್ನು ಯಾರು ಹೊರ ಜಗತ್ತಿಗೆ ಹೇಳಿಕೊಳ್ಳುವ ಗೋಜಿಗೆ ಹೋಗದೆ ಗೌಪ್ಯವಾಗಿಡುವ ಪ್ರಯತ್ನ ನಡೆಯುತ್ತದೆ. ಆದರೂ ಇದನ್ನು ತೆರೆದ ರಹಸ್ಯವೆಂದೆ ಹೇಳಬಹುದು ಏಕೆಂದರೆ ಕೆಳಹಂತದಿಂದ ಮೇಲಿನ ಹಂತದವರೆಗೂ ಅಧಿಕಾರಿ ವರ್ಗದವರು ಭಾಗಿಯಾಗಿರುವುದರಿಂದ ಇದನ್ನು ಸಾಮಾನ್ಯ ಜನರ ನಡುವೆ ಸಹಭಾಗಿ ಅವಲೋಕನದಿಂದ ತಿಳಿಯಬಹುದೇ ಹೊರತು ಯಾವುದೇ ಅಧಿಕೃತವಾದಂತಹ ದಾಖಲೆಗಳು ಸಿಗಲು ಸಾಧ್ಯವಾಗುವುದಿಲ್ಲ. ಈ ರೀತಿಯ ಅವ್ಯವಸ್ಥೆಗೆ ಕಾರಣಗಳೇನು ಅದಕ್ಕೆ ಪರಿಹಾರಗಳೇನು ಎಂಬುದನ್ನು ಸಂಶೋಧನಾ ಫಲಿತಗಳಲ್ಲಿ ವಿವರಿಸಲಾಗಿದೆ.

"ಗ್ರಾಮೀಣ ನಿರುದ್ಯೋಗ ನಿರ್ಮೂಲನೆ ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ– ದಾವಣಗೆರೆ ಜಿಲ್ಲೆಯ ಒಂದು ಅಧ್ಯಯನ"ಕ್ಕೆ ಸಂಬಂಧಿಸಿದ ಸಂಶೋಧನೆಯನ್ನು ಕೆಲವು ನಿರ್ದಿಷ್ಟ ಉದ್ದೇಶಗಳೊಂದಿಗೆ ಕೈಗೊಳ್ಳಲಾಗಿದ್ದು ಈ ಕೆಳಕಂಡಂತೆ ಗಮನಿಸಬಹುದಾಗಿದೆ.

- ಗ್ರಾಮೀಣ ಜನತೆಯ ಜೀವನ ನಿರ್ವಹಣೆಗೆ ಇದು ಸಹಕಾರಿಯಾಗಿದೆಯೇ ಎಂಬುದನ್ನು ಅರ್ಥೈಸಿಕೊಳ್ಳುವುದು.
- ಈ ಯೋಜನೆಯ ಅನುಷ್ಠಾನದಲ್ಲಿನ ಆಡಳಿತಾತ್ಮಕ ಭ್ರಷ್ಟಾಚಾರ ಸಮಸ್ಯೆಗಳನ್ನು ಗುರುತಿಸುವುದು.
- MGNREGAದ ಜಾರಿಯಿಂದ ನಿರುದ್ಯೋಗ ಪ್ರಮಾಣ ಕಡಿಮೆಯಾಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದು.
- ಈ ಯೋಜನೆಯಿಂದ ಪ್ರಸ್ತುತ ಉತ್ಪಾದನಾವ್ಯವಸ್ಥೆಯ ಮೇಲೆ ಪರಿಣಾಮವಿದೆಯೇ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು.
- ಮಹಾತ್ಮಗಾಂಧಿ ಯೋಜನೆಯ ಅನುಷ್ಠಾನಗೊಳಿಸುವಲ್ಲಿ ಯಾವುದಾದರು ಸಮಸ್ಯೆಗಳಿವೆಯೇ ಎಂಬುದನ್ನು ತಿಳಿಯುವುದು.

ಮೊದಲನೆಯದಾಗಿ '*ಗ್ರಾಮೀಣ ಜನತೆಯ ಜೀವನ ನಿರ್ವಹಣೆಗೆ ಇದು ಸಹಕಾರಿಯಾಗಿದೆಯೇ*' ಎಂಬುದನ್ನು ಅರ್ಥೈಸಿಕೊಳ್ಳುವುದು. ಈ ಉದ್ದೇಶವನ್ನು ಅವಲೋಕಿಸಿದಾಗ ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಬಹುತೇಕ ಹೆಚ್ಚಿನ ಗ್ರಾಮೀಣ ಜನತೆ ಕೃಷಿ ಕೆಲಸ ಕಾರ್ಯಗಳಲ್ಲಿಯೇ ತೊಡಗಿರುತ್ತಾರೆ. ಗ್ರಾಮೀಣ ಜನತೆ ಇಂದಿನ ದಿನ ವಾಣಿಜ್ಯ ಬೆಳೆಗಳನ್ನು ಬೆಳೆಯುವುದರ ಮೂಲಕ ಹೆಚ್ಚಿನ ಆದಾಯಗಳಿಸುವುದರ ಜೊತೆಗೆ ಜೀವನ ನಿರ್ವಹಣೆ ಸಾಕಷ್ಟು ರೀತಿಯ ವ್ಯವಸ್ಥೆಯನ್ನು ಇತ್ತೀಚಿನ ದಿನಗಳಲ್ಲಿ ಮಾಡಿಕೊಂಡಿದ್ದಾರೆ. ಬಹುತೇಕವಾಗಿ ಗ್ರಾಮೀಣ ಜನತೆ ಹಸಿವು ಮುಕ್ತತೆಯಿಂದ ಇರುವುದನ್ನು ಕಾಣಬಹುದು ಆದರೆ ಜೀವನ ನಿರ್ವಹಣೆಗಾಗಿ ಹೆಚ್ಚಿನದಾಗಿ ಕೃಷಿಯೇತರ ದಿನಗಳಲ್ಲಿ ಕೂಲಿಯನ್ನೆ ಆಧಾರಿತವಾಗಿಸಿಕೊಂಡಿದ್ದಾರೆ. ಮಹಾತ್ಮಗಾಂಧಿ ನರೇಗಾ ಯೋಜನೆಯ ಬಹುಪಾಲು ಕೂಲಿಹಣ ಹೆಚ್ಚಿನ ಜನರಿಗೆ ಸಕಾಲದಲ್ಲಿ ತಲುಪಲು ಸಾಧ್ಯವಾಗಿಲ್ಲ ಏಕೆಂದರೆ ಸರ್ಕಾರದಿಂದ ಬಿಡುಗಡೆಗೊಳ್ಳುವಲ್ಲಿ ಸಾಕಷ್ಟು ರೀತಿಯ ಆಡಳಿತಾತ್ಮಕ ತೊಂದರೆಗಳನ್ನು ಎದುರಿಸುವಂತಾಗಿದೆ. ಆನರಿಗೆ ಯೋಜನೆ ಹಣ ಯಾವೋತ್ತೋ ಬರುವುದರಿಂದ ಬಹುತೇಕರು ಹಣಕ್ಕಾಗಿ ಬೇರೆ ಕೂಲಿ ಕೆಲಸಗಳಿಗೆ ಮುಖ ಮಾಡಿರುವುದು ಕಂಡು ಬರುತ್ತದೆ. ಹಾಗೆಯೇ ಖಾತರಿ ಯೋಜನೆಯಿಂದ ಬಂದಂತಹ ಹಣ ಜೀವನ ನಿರ್ವಹಣೆಗೆ ಒಂದು ರೀತಿಯ ಸಹಕಾರಿಯಾಗಿದೆಯೋ ವರೆತು ವ್ಯವಸ್ಥಿತವಾದ ಜೀವನ ನಿರ್ವಹಣೆಗೆ ಸಾಧ್ಯವಾಗಿಲ್ಲವಾಗಿದೆ.

ಎರಡನೆಯದಾಗಿ '*ಈ ಯೋಜನೆಯ ಅನುಷ್ಠಾನದಲ್ಲಿನ ಆಡಳಿತಾತ್ಮಕ ಭ್ರಷ್ಟಾಚಾರ ಸಮಸ್ಯೆಗಳನ್ನು ಗುರುತಿಸುವುದು*'. ಈ ಉದ್ದೇಶವನ್ನು ವಿಶ್ಲೇಷಿಸಿದಾಗ ಯೋಜನೆಗಳ ಅನುಷ್ಠಾನತೆಯಲ್ಲಿ ಸಮಸ್ಯೆಗಳನ್ನು ಗುರುತಿಸಲು ಸಾಧ್ಯವಾಗಿದೆ. ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ನಡೆಯುವ ಗ್ರಾಮಸಭೆ ಮತ್ತು ವಾರ್ಡ್‌ಸಭೆಗಳಲ್ಲಿನ ಗಲಾಟೆಗಳಿಂದಾಗಿ ಯೋಜನೆಗಳನ್ನು ತಯಾರಿಸುವಾಗ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಹಾಗೂ ಗ್ರಾಮಸ್ಥರ ನಡುವೆ ನಡೆಯುವಂತಹ ವಿಚಾರಗಳು ಕೆಲವು ಒಪ್ಪಂದಗಳ ಮೂಲಕ ನಡೆಯುವಂತಹ ಅಂಶಗಳು ಆಡಳಿತಾತ್ಮಕ ಭ್ರಷ್ಟಾಚಾರತೆಯನ್ನು ಸಾಕ್ಷೀಕರಿಸುವುದಾಗಿದೆ. ಆದರೆ ಅಧಿಕೃತವಾಗಿ ಇವುಗಳು ಭ್ರಷ್ಟತೆಯಿಂದ ಕೂಡಿವೆ ಎಂದು ದಾಖಲೆಗಳನ್ನು ಒದಗಿಸುವುದು ಸಾಧ್ಯವಾಗದಾಗಿರುತ್ತದೆ, ಏಕೆಂದರೆ ಇದು ಅನಧಿಕೃತವಾಗಿ ನಡೆಯುವ ಒಡಂಬಡಿಕೆಗಳಾಗಿರುತ್ತದೆ ಎನ್ನಬಹುದಾಗಿದೆ. ಒಂದು ಊರಿನಲ್ಲಿನ ಸಾರ್ವಜನಿಕ ಚರಂಡಿ ವ್ಯವಸ್ಥೆ, ಕುಡಿಯುವ ನೀರು, ಹಾಗೂ ಇತರೆ ಪಂಚಾಯಿತಿ ಕಾರ್ಯಗಳ ಹೊರೆತುಪಡಿಸಿ. ಪಂಚಾಯಿತಿ ವ್ಯಾಪ್ತಿಯಲ್ಲಿ ಕೃಷಿ ಕೆಲಸಕ್ಕೆ ಸಹಾಯಕವಾಗಿ ಚೆಕ್‌ಡ್ಯಾಂ, ಶೌಚಾಲಯ ಹಾಗೂ ಗಿಡ ನೆಡುವಿಕೆಯಂತಹ ಕಾರ್ಯಗಳಲ್ಲಿ ಸಾಕಷ್ಟು ರೀತಿಯ ಪೈಪೋಟಿ ಆಡಳಿತಾತ್ಮಕ ಭ್ರಷ್ಟಾಚಾರತೆಯಲ್ಲಿ ತೊಡಗಲು ಸಾಧ್ಯವಾಗಿಸುವ ನಿಟ್ಟಿನಲ್ಲಿ ಕಾರ್ಯಗತಗೊಂಡಿವೆ.

ಮೂರನೆಯದಾಗಿ '*MGNREGAದ ಜಾರಿಯಿಂದ ನಿರುದ್ಯೋಗ ಪ್ರಮಾಣ ಕಡಿಮೆಯಾಗಿದೆಯೇ*' ಎಂಬುದನ್ನು ತಿಳಿದುಕೊಳ್ಳುವುದು. ಈ ಉದ್ದೇಶವನ್ನು ವಿಶ್ಲೇಷಿಸಿದಾಗ ಭಾರತದ ಬೃಹತ್ ಯೋಜನೆಯಾಗಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಸಂಶೋಧನಾ ವ್ಯಾಪ್ತಿಗೆ ಒಳಪಟ್ಟಂತಹ ಜಿಲ್ಲೆಯಲ್ಲಿ ನಿರುದ್ಯೋಗ ನಿರ್ಮೂಲನೆ ಮಾಡುವಲ್ಲಿ ಸಫಲವಾಗಿದೆಯೇ ಎಂಬುದನ್ನು ಅವಲೋಕಿಸಿದಾಗ 2014ರಿಂದ 2019ರವರೆಗೆ ಉದ್ಯೋಗದ ಮಾನವ ದಿನಗಳ ಸೃಜಿಸುವಿಕೆಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಳಿತಗಳನ್ನು ಕಾಣಬಹುದಾಗಿದೆ. 35 ರಿಂದ 40 ಲಕ್ಷ ದಿನಗಳನ್ನು ಸೃಜಿಸಿರುವ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲಾಗಿದ್ದು, ನಿರುದ್ಯೋಗ ನಿರ್ಮೂಲನೆಯಲ್ಲಿ ಮಹಾತ್ಮಗಾಂಧಿ ನರೇಗಾ ಉತ್ತಮ ಪ್ರತಿಕ್ರಿಯೆಯನ್ನು ಪಡೆದುಕೊಂಡಿದೆ. ಉದ್ಯೋಗ ಖಾತರಿ ಯೋಜನೆಯಲ್ಲಿ ತಾವು ಭಾಗಿಯಾಗಿದ್ದು ಅದಕ್ಕೆ ಪ್ರತಿಯಾಗಿ ದಿನಗೂಲಿ ವೇತನವನ್ನು ತಮ್ಮ ಖಾತೆಯಲ್ಲಿ ಜಮಾವಣೆಯಾಗಿರುವುದನ್ನು ಸಹ ಫಲಾನುಭವಿಗಳಿಂದ ತಿಳಿದುಕೊಳ್ಳಲಾಗಿದೆ. ಅದೇ ತೆರನಾಗಿ ಇತರೆ ವರ್ಗದ ಪ್ರತಿವರ್ತಿಗಳಿಂದ ಉದ್ಯೋಗ ಖಾತರಿ ಯೋಜನೆಯು ಉದ್ಯೋಗವನ್ನು ಒದಗಿಸಿರುವ ಬಗೆಗೆ ಸಕಾರಾತ್ಮಕ ಸ್ಪಂದನೆಯನ್ನು ನೀಡಿರುವುದನ್ನು ಕಾಣಬಹುದು ಮತ್ತು ಸಂದರ್ಶಿತರು ನೀಡಿರುವ ಮಾಹಿತಿಯಿಂದ ಉದ್ಯೋಗವನ್ನು ಪಡೆಯುವಲ್ಲಿ ಗ್ರಾಮೀಣ ಜನತೆ ಯಶಸ್ವಿಯಾಗಿದ್ದಾರೆ.

ನಾಲ್ಕನೆಯದಾಗಿ '*ಈ ಯೋಜನೆಯಿಂದ ಪ್ರಸ್ತುತ ಉತ್ಪಾದನಾ ವ್ಯವಸ್ಥೆಯ ಮೇಲೆ ಪರಿಣಾಮವಿದೆಯೇ*' ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು. ಈ ಉದ್ದೇಶವನ್ನು ಅವಲೋಕಿಸಿದಾಗ ಆಯ್ಕೆ ಮಾಡಿಕೊಂಡಂತಹ ಸಂಶೋಧನಾ ಕ್ಷೇತ್ರವು ವಾಣಿಜ್ಯ ವ್ಯಾಪಾರದಲ್ಲಿ ಸ್ವಲ್ಪ ಮಟ್ಟಿಗೆ ಮುಂದುವರೆದಂತಹ ಜಿಲ್ಲೆಯಂದೆ ಗುರುತಿಸಿಕೊಂಡಿದೆ. ಪ್ರಸ್ತುತ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯು ಅಧಿಕೃತ ಅಂಕಿ ಸಂಖ್ಯೆಗಳ ಮೂಲಕ ಯಶಸ್ವಿಯಾಗಿರುವುದು ಕಾಣಬಹುದು. ದಾವಣಗೆರೆ ಜಿಲ್ಲೆಯಲ್ಲಿ ಬರುವಂತಹ ತಾಲ್ಲೂಕುಗಳು ಸಹ ವಾಣಿಜ್ಯ ವಿಷಯದಲ್ಲಿ ಮುಂದಿದ್ದು ಒಂದು ದಿನದ ದಿನಗೂಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೊಡುವುದಕ್ಕಿಂತ ಎರಡು ಪಟ್ಟು ಹೆಚ್ಚಿರುವುದು ಗಮನಾರ್ಹ ವಿಷಯವಾಗಿದೆ. ಹಾಗೆಯೇ ಇಲ್ಲಿನ ಉತ್ಪಾದನಾ ವ್ಯವಸ್ಥೆ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಬೀರದೆ ಇರುವುದನ್ನು ಉಲ್ಲೇಖಿಸಬಹುದಾಗಿದೆ. ಮಹಾತ್ಮ ಗಾಂಧಿ ನರೇಗಾ ಯೋಜನೆಗಿಂತ ಖಾಸಗಿ ದಿನಗೂಲಿಗೆ ಹೆಚ್ಚಿನ ಜನರು ಆಕರ್ಷಿತರಾಗುವುದನ್ನು ನೋಡಬಹುದಾಗಿದೆ. ಇಲ್ಲಿ ನಿಜವಾಗಲೂ

ಉದ್ಯೋಗ ಖಾತರಿ ಯೋಜನೆಗೆ ಗ್ರಾಮೀಣ ಜನರು ಆಸಕ್ತಿ ತೋರಿದ್ದಾರೆಯೇ ಎಂಬುದನ್ನು ಗಮನಿಸಬೇಕಾಗಿದೆ.

ಮತ್ತೊಂದು ಸತ್ಯಾಂಶವನ್ನು ಗ್ರಹಿಸಬೇಕಾದರೆ ಮಹಾತ್ಮ ಗಾಂಧಿ ನರೇಗಾ ಯೋಜನೆಗೆ ಗ್ರಾಮೀಣ ಜನರು ಸಂಪೂರ್ಣವಾಗಿ ಕಾಮಗಾರಿ ಮುಗಿಯುವ ತನಕ ಬರುವುದಿಲ್ಲ, ಪಂಚಾಯಿತಿ ವ್ಯವಸ್ಥೆಗೆ ಲಘು ಯಂತ್ರಗಳನ್ನು ಬಳಕೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವಕಾಶ ಕಲ್ಪಿಸಿರುವುದರಿಂದ ಕಾಮಗಾರಿಗಳು ತ್ವರಿತಗತಿಯಲ್ಲಿ ಮುಗಿಸಿ ಖಾತರಿ ಯೋಜನಯ ಹಣವನ್ನು ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ.

ಐದನೆಯದಾಗಿ *'ಮಹಾತ್ಮ ಗಾಂಧಿ ಯೋಜನೆಯ ಅನುಷ್ಠಾನಗೊಳಿಸುವಲ್ಲಿ ಯಾವುದಾದರು ಸಮಸ್ಯೆಗಳಿವೆಯೇ'* ಎಂಬುದನ್ನು ತಿಳಿಯುವುದು. ಈ ಉದ್ದೇಶವನ್ನು ಅವಲೋಕಿಸಿದಾಗ ಜಿಲ್ಲೆಯಾದ್ಯಾಂತ ಯೋಜನೆಯನ್ನು ತಳಮಟ್ಟದಲ್ಲಿ ಅನುಷ್ಠಾನಗೊಳಿಸಲು ಭಿನ್ನ ರೀತಿಯ ಫಲಿತಾಂಶವನ್ನು ಕಾಣಬಹುದು ಏಕೆಂದರೆ, ಮಹಾತ್ಮ ಗಾಂಧಿ ನರೇಗಾ ಯೋಜನೆಯ ಪ್ರಾದೇಶಿಕವಾರು ಹಲವು ರೀತಿಯಲ್ಲಿ ಯೋಜನೆಯನ್ನು ಸಫಲಗೊಳಿಸಲು ಕಾರ್ಯಕ್ರಮವನ್ನು ರೂಪಿಸಿದೆ ಅದಕ್ಕಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಜನರಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಗ್ರಾಮೀಣ ಜನರ ವೈಯಕ್ತಿಕವಾದ ಜಮೀನು ಹಾಗೂ ಮನೆಗಳಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸಿರುವುದು ಕಾಣಬಹುದು. ಖಾತರಿ ಯೋಜನೆಯ ಕ್ರಿಯಾ ಯೋಜನೆಯನ್ನು ತಯಾರಿಸುವಾಗಲೆ ಅರ್ಧದಷ್ಟು ಸಮಸ್ಯೆಗಳಾಗಿರುತ್ತವೆ ಜೊತೆಗೆ ಕಾರ್ಯಕ್ರಮವನ್ನು ಜಾರಿಗೊಳಿಸುವಂತಹ ಸಂದರ್ಭದಲ್ಲಿ ಕೆಲವು ಸಮಸ್ಯೆಗಳು ಅಂದರೆ

**ಹಾಜರಾತಿಯ ಸಮಸ್ಯೆ:** ಕೆಲವೆಡೆ ಹಾಜರಾತಿಗಾಗಿ ಬಯೋಮೆಟ್ರಿಕ್ ಬಳಸಬೇಕು ಎಂದರೂ ಬಳಕೆ ಮಾಡಲಾಗಿಲ್ಲ ಅದಕ್ಕೆ ಸಾಕಷ್ಟು ರೀತಿಯ ತಾಂತ್ರಿಕ ಸಮಸ್ಯೆಗಳನ್ನು ಹೇಳುತ್ತಾರೆ. ಹಾಗೆಯೇ ಅದರಿಂದ ಪಾರದರ್ಶಕವಾದ ಹಾಜರಾತಿ ನೀಡಬೇಕಾಗುತ್ತದೆಯೆಂದು ಅದನ್ನು ಬಳಸದೇ ಇರುವುದನ್ನು ನೋಡಬಹುದು.

**ವೈಯಕ್ತಿಕ ಕಾಮಗಾರಿಗಳಲ್ಲಿ ಭ್ರಷ್ಟತೆ :** ಕ್ರಿಯಾ ಯೋಜನೆಯನ್ನು ತಯಾರಿಸುವ ಸಂದರ್ಭದಲ್ಲಿಯೇ ಕೆಲವು ಗ್ರಾಮೀಣ ಜನರಲ್ಲಿನ ಮನೆಗಳಲ್ಲಿ ಶೌಚಾಲಯ ಕಟ್ಟಿಸಲು, ಹಾಗೂ ಜಮೀನಿನಲ್ಲಿ ಬದು ನಿರ್ಮಾಣ ಮತ್ತು ಚೆಕ್ ಡ್ಯಾಂಗಳನ್ನು ನಿರ್ಮಿಸುವ ಸಲುವಾಗಿ ವರ್ಕ ಆರ್ಡರ್ ಹಾಕಿಸಲು ಭ್ರಷ್ಟತೆ ನಡೆಯುವಂತದ್ದು ಸರ್ವೆ ಸಾಮಾನ್ಯವಾಗಿದೆ. ಉದ್ಯೋಗ ಖಾತರಿ ಯೋಜನೆಯಲ್ಲಿ ಯಾವುದೇ ವೈಯಕ್ತಿಕ ಕಾಮಗಾರಿಗಳು ನಡೆಯಬೇಕಾದರೆ ಭ್ರಷ್ಟತೆ ಸಹಜವಾಗಿದೆ.

**ಪ್ರಾಕ್‌ಕಲ್ಪನೆಗಳು**

ಸಂಶೋಧನೆಯ ಆರಂಭದಲ್ಲಿ ಇರಿಸಿಕೊಂಡಿದ್ದ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿದ ನಂತರ ಸಂಶೋಧನೆಗೆ ರಚಿಸಿಕೊಂಡಿರುವ ಪ್ರಾಕ್‌ಕಲ್ಪನೆಗಳನ್ನು ಈ ಕೆಳಕಂಡಂತೆ ಮೌಲ್ಯಮಾಪನ ಮಾಡಲಾಗಿದೆ. ಅವುಗಳೆಂದರೆ:

- ಈ ಯೋಜನೆಯಿಂದ ಉದ್ಯೋಗ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ.
- ಈ ಯೋಜನೆಗೆ ಬರುವಂತಹ ಅನುದಾನವು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿಲ್ಲ.
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳು ಭ್ರಷ್ಟಾಚಾರತೆಯಿಂದ ಕೂಡಿವೆ.
- ಪ್ರಸ್ತುತ ಈ ಯೋಜನೆಯು ಉತ್ಪಾದನಾ ವ್ಯವಸ್ಥೆಯ ಮೇಲೆ ಹಾಗೂ ಉದ್ಯೋಗದಲ್ಲಿ ತೊಡಗಿರುವವರಲ್ಲಿ ಅಸಡ್ಡೆ ಅಥವಾ ಸೋಮಾರಿತನವನ್ನು ಬೆಳೆಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಮೊದಲನೆಯದಾಗಿ *'ಈ ಯೋಜನೆಯಿಂದ ಉದ್ಯೋಗ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ'.* ಈ ಪ್ರಾಕ್ ಕಲ್ಪನೆ ಅವಲೋಕಿಸಿದಾಗ ಮಹಾತ್ಮಗಾಂಧಿ ನರೇಗಾ ಯೋಜನೆಯಿಂದ 2014 ರಿಂದ 2019ರ ವರೆಗಿನ ಅಂಕಿ ಅಂಶಗಳ ಆಧಾರಿತವಾಗಿ ಹಾಗೂ ಸಂದರ್ಶನ ಕೈಗೊಂಡಂತಹ ಸಂದರ್ಭದಲ್ಲಿ ಪಂಚಾಯಿತಿ ಅಧಿಕಾರಿ ಹಾಗೂ ಜನ ಪ್ರತಿನಿಧಿ ವರ್ಗ ನೀಡಿರುವಂತಹ ಆಧಾರಿತವಾಗಿ ಯೋಜನೆಯಿಂದ ನಿರುದ್ಯೋಗ ನಿರ್ಮೂಲನೆ ತೊಲಗಿಸಿ ಉದ್ಯೋಗ ಪ್ರಮಾಣವನ್ನು ಹೆಚ್ಚಿಸುವಂತಹ ಸಾಕಷ್ಟು ಪ್ರಯತ್ನಗಳು ಉತ್ತಮ ಫಲ ನೀಡಿವೆ. 2014 ರಿಂದ 2019ರವರೆಗೂ ಸಹ ಏರಿಳಿತಗಳನ್ನು ಕಂಡು ಕೊಂಡಿರುವ ಉದ್ಯೋಗ ಒದಗಿಸುವ ಪ್ರಮಾಣವು ಒಂದು ರೀತಿಯಾಗಿ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವಲ್ಲಿ ಯಶಸ್ವಿಯಾಗಿದೆ. ಅಧಿಕಾರ ವಿಕೇಂದ್ರಿಕರಣ ಮೂಲಕ ಕೇಂದ್ರದಿಂದ ಗ್ರಾಮೀಣ ಮಟ್ಟದವರೆಗೂ ತಲುಪಿರುವ ಮಹಾತ್ಮಗಾಂಧಿ ನರೇಗಾ ಯೋಜನೆಯನ್ನು ಗ್ರಾಮ ಪಂಚಾಯಿತಿಗಳು ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಈ ನಿಟ್ಟಿನಲ್ಲಿ ಅಂಕಿ ಅಂಶಗಳು ಹಾಗೂ ಸಂದರ್ಶಿತ ಫಲಾನುಭವಿ ಮತ್ತು ಇತರೆ ವರ್ಗದ ಪ್ರತಿವರ್ತಿಗಳ ಅನಿಸಿಕೆಗಳು ಪ್ರಾಕ್ ಕಲ್ಪನೆಗೆ ಪೂರಕವಾದಂತಹ ಫಲಿತಾಂಶ ಬಂದಿರುತ್ತದೆ.

ಎರಡನೆಯದಾಗಿ *'ಈ ಯೋಜನೆಗೆ ಬರುವಂತಹ ಅನುದಾನವು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿಲ್ಲ'.* ಈ ಪ್ರಾಕ್ ಕಲ್ಪನೆಯನ್ನು ಅವಲೋಕಿಸಿದಾಗ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯ ಅನುದಾನವೆಂಬುದು ಕೇಂದ್ರ ಮತ್ತು ರಾಜ್ಯಗಳ ಸಹಯೋಗದಿಂದ ಗ್ರಾಮಮಟ್ಟಕ್ಕೆ ತಲುಪುವುದನ್ನು ಕಾಣಬಹುದು. ಅದೇ ತೆರನಾಗಿ ಈ ಯೋಜನೆಯಲ್ಲಿ ಅನುದಾನವು ಸಂಪೂರ್ಣವಾಗಿ ಬಳಕೆಯಾಗಿರುವುದನ್ನು ಗ್ರಹಿಸಬಹುದಾಗಿದೆ. ಮಹಾತ್ಮಗಾಂಧಿ ನರೇಗಾ ಯೋಜನೆಯಲ್ಲಿ ಮುಂಗಡವಾಗಿ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗಿರುವುದಿಲ್ಲ ಅದರ ಬದಲಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು ಗ್ರಾಮಮಟ್ಟದಲ್ಲಿ ಗ್ರಾಮಸಭೆ ಮತ್ತು ವಾರ್ಡ ಸಭೆಗಳನ್ನು ನಡೆಸುವುದರ ಮೂಲಕ ಕಾಮಗಾರಿಗಳ ಪಟ್ಟಿಯನ್ನುಮೇಲಿನ ಹಂತಕ್ಕೆ ಕಳುಹಿಸಿ ಕೊಡಲಾಗುತ್ತದೆ. ಈ ರೀತಿಯಾಗಿ ಕಳುಹಿಸಿದ ಕಾಮಗಾರಿಗಳಲ್ಲಿ ಆಯ್ದ ಮತ್ತು ಅವಶ್ಯಕ ಕಾಮಗಾರಿಗಳ ಚಾಲನೆಗೆ ಆದೇಶ ನೀಡಲಾಗುತ್ತದೆ. ಆ ನಂತರ ಕಾಮಗಾರಿಗಳು ಸಂಪೂರ್ಣವಾಗಿ ಮುಕ್ತಾಯಗೊಂಡು ಜನರ ದಿನಗೂಲಿ ಹಾಗೂ ಇತರೆ ಖರ್ಚು ವೆಚ್ಚಗಳನ್ನು ಕಳುಹಿಸಿದ ನಂತರವೇ ಹಣ ಸಂದಾಯವಾಗುವುದರಿಂದ ಮತ್ತು ಆ ಹಣವನ್ನು ಎಲ್ಲರ ಖಾತೆಗಳಿಗೂ ಜಮೆ ಮಾಡಬೇಕಾಗಿರುವುದರಿಂದ ಈ ಯೋಜನೆಗೆ ಸಂಬಂಧಿಸಿದ ಅನುದಾನವು ಸಂಪೂರ್ಣ ಪ್ರಮಾಣದಲ್ಲಿ

ಬಳಕೆಯಾಗುತ್ತದೆ. ಆ ನೆಲೆಯಲ್ಲಿ ಈ ಪ್ರಾಕ್‌ಕಲ್ಪನೆಗೆ ಫಲಿತಾಂಶವು ವ್ಯತಿರಿಕ್ತವಾಗಿ ಬಂದಿರುವುದು ಗಮನಾರ್ಹವಾಗಿದೆ.

ಮೂರನೆಯದಾಗಿ *'ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳು ಭ್ರಷ್ಟಾಚಾರತೆಯಿಂದ ಕೂಡಿವೆ'.* ಈ ಪ್ರಾಕ್‌ಕಲ್ಪನೆಯನ್ನು ಅವಲೋಕಿಸಿದಾಗ ಭಾರತದ ರಾಷ್ಟ್ರಮಟ್ಟದಿಂದ ಗುರುತಿಸಿಕೊಂಡಿರುವ ಮಹಾತ್ಮಗಾಂಧಿ ನರೇಗಾ ಯೋಜನೆಯು ಕೋಟ್ಯಾಂತರ ರೂ.ಗಳು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವುದನ್ನು ಕಾಣಬಹುದು. ಅಭಿವೃದ್ಧಿಯೆಂಬುದು ಕಲ್ಯಾಣ ರಾಜ್ಯ ಪ್ರತಿರೂಪವಾಗಿದೆ ಆದರೂ ಒಂದು ರಾಷ್ಟ್ರ ಅಭಿವೃದ್ಧಿಯನ್ನು ಸಾಧಿಸಲು ಬರಿ ಹಣದಿಂದ ಸಾಧ್ಯವಾಗದು. ಏಕೆಂದರೆ ಕಾರ್ಯಗತವಾಗಿರುವ ಕಾಮಗಾರಿಗಳು ಯೋಜನೆಯ ಉದ್ದೇಶವನ್ನು ಪೂರೈಸಿದೆಯೇ ಎಂಬುದನ್ನು ಗ್ರಹಿಸುವುದು ತುಂಬಾ ಅಗತ್ಯವಾಗಿದೆ. ಉದ್ಯೋಗ ಖಾತರಿ ಯೋಜನೆಯಲ್ಲಿ ಎಲ್ಲಾ ಕಾಮಗಾರಿಗಳಲ್ಲಿ ಕಡ್ಡಾಯವಾಗಿ ಮಾನವ ಸಂಪನ್ಮೂಲವನ್ನು ಬಳಕೆ ಮಾಡಿಕೊಳ್ಳಬೇಕು, ಏಕೆಂದರೆ ಗ್ರಾಮೀಣ ಜನತೆಯನ್ನು ನಿರುದ್ಯೋಗ ಮುಕ್ತರನ್ನಾಗಿಸುವ ಸಲುವಾಗಿದೆ. ಆದರೆ ಯೋಜನೆಗಳ ಕಾಮಗಾರಿಗಳು ನಾಮಕಾವಸ್ಥೆಗೆ ಜನರನ್ನು ತೋರಿಸಿ ಯಂತ್ರಗಳಿಂದ ಕಾಮಗಾರಿಗಳನ್ನು ಮುಕ್ತಾಯಗೊಳಿಸುವುದು ಕ್ಷೇತ್ರಾಧ್ಯಯನದಿಂದ ತಿಳಿಯಲಾಗಿದೆ. ಹಾಗೆಯೇ ಪ್ರತಿಯೊಂದು ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸುವ ಸಂದರ್ಭ ಭ್ರಷ್ಟತೆಯನ್ನು ಸಹ ಕಾಣಬಹುದಾಗಿದ್ದು ಈ ವಿಷಯವು ಪಾಕ್ ಕಲ್ಪನೆಗೆ ಪೂರಕವಾದಂತಹ ಫಲಿತಾಂಶ ನೀಡಿದೆ.

ನಾಲ್ಕನೆಯದಾಗಿ *'ಪ್ರಸ್ತುತ ಈ ಯೋಜನೆಯು ಉತ್ಪಾದನಾ ವ್ಯವಸ್ಥೆಯ ಮೇಲೆ ಹಾಗೂ ಉದ್ಯೋಗದಲ್ಲಿ ತೊಡಗಿರುವವರಲ್ಲಿ ಅಸಡ್ಡೆ ಅಥವಾ ಸೋಮಾರಿತನವನ್ನು ಬೆಳೆಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ'.* ಈ ಪ್ರಾಕ್‌ಕಲ್ಪನೆಯನ್ನು ಅವಲೋಕಿಸಿದಾಗ ಗ್ರಾಮೀಣ ಜನರ ಕೃಷಿಯೇತರ ದಿನಗಳಲ್ಲಿ ಮತ್ತು ಬರಗಾಲ ಸನ್ನಿವೇಶದಲ್ಲಿ ನಿರುದ್ಯೋಗ ಪ್ರಮಾಣವನ್ನು ಕಡಿಮೆಗೊಳಿಸುವ ಸಲುವಾಗಿ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯು ಜಾರಿಗೊಂಡಿದೆ. ಪ್ರಸ್ತುತವಾಗಿ ಯೋಜನೆಯು ಖಾಸಗಿ ವಲಯದಲ್ಲಿ ಸಿಗುವ ಕೂಲಿ ಕೆಲಸಕ್ಕೆ ವಿರುದ್ಧವಾಗಿದೆ ಎಂದರೂ ತಪ್ಪಾಗಲಾರದು. ಆದರೆ ವಾಸ್ತವವಾಗಿ ಈ ಯೋಜನೆಯಲ್ಲಿ ಗ್ರಾಮೀಣ ಜನರು ಕಾಮಗಾರಿ ಕೆಲಸಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಸೋಮಾರಿತನ, ಅಸಡ್ಡೆ, ಸರ್ಕಾರದ ಹಣವೆಂದು ತಾತ್ಸರ ಮಾಡಿರುವುದು ಸಂದರ್ಶನ ಮುಖಾಂತರ ಪ್ರತಿವರ್ತಿಗಳಿಂದ ತಿಳಿಯಲಾಗಿದೆ. ಇದರ ಜೊತೆ ಜೊತೆಗೆ ಇದು ಕೃಷಿಯೇತರ ಕೆಲಸಗಳಲ್ಲಿ ಹಾಗೂ ಇತರೆ ಉತ್ಪಾದನಾ ವ್ಯವಸ್ಥೆಯ ಮೇಲಾಗಲಿ ಯಾವುದೆ ಪ್ರತಿಕೂಲ ಪರಿಣಾಮ ಬೀರದೆ ಇರುವುದು ಗಮನಾರ್ಹ. ಏಕೆಂದರೆ ಮಹಾತ್ಮಗಾಂಧಿ ನರೇಗಾ ಯೋಜನೆಯಲ್ಲಿ ನೀಡುವ ಕೂಲಿಗೂ ಹಾಗೂ ಖಾಸಗಿ ವಲಯದಲ್ಲಿ ಸಿಗುವ ವೇತನಕ್ಕು ದುಪ್ಪಟ್ಟು ವ್ಯತ್ಯಾಸವಿರುವುದರಿಂದ ಖಾಸಗಿ ಉತ್ಪಾದನಾ ವ್ಯವಸ್ಥೆಯ ಹಾಗೂ ಹೆಚ್ಚು ಭೂ ಹಿಡುವಳಿದಾರರ ಕೆಲಸ ಕಾರ್ಯಗಳ ಮೇಲೆ ಯಾವುದೆ ದುಷ್ಪರಿಣಾಮಗಳಿಲ್ಲ ಎನ್ನಬಹುದು. ಕ್ರಿಯಾ ಯೋಜನೆ ಸಲ್ಲಿಸಿ ಅನುಮೋದನೆ ಪಡೆದ ಎಷ್ಟೊ ಕಾಮಗಾರಿಗಳನ್ನು ಯಂತ್ರಗಳಿಂದನೆ ಮುಗಿಸುವುದರಿಂದ ಜನರ ಅಗತ್ಯತೆ ಇರುವುದಿಲ್ಲವೆಂದು ಪಂಚಾಯಿತಿಯಿಂದಲೆ ಅನಧಿಕೃತ ವರದಿ ಬರುವುದರಿಂದ ಖಾಸಗಿ ವಲಯದ ಕಡೆಗೆ ಹೆಚ್ಚು ಜನ ಮುಖ ಮಾಡುವುದು ಸಹಜವಾಗಿದೆ.

ಒಟ್ಟಾರೆಯಾಗಿ ಕಾಮಗಾರಿಗಳಲ್ಲಿ ಸರಿಯಾಗಿ ಶೇಕಡ 70% ಕ್ಕಿಂತ ಹೆಚ್ಚು ಜನ ಭಾಗಿಯಾಗದೆ ಇರುವುದರಿಂದ ಸೋಮಾರಿತನವಾಗಲಿ, ಖಾಸಗಿತನದ ಉತ್ಪಾದನಾ ವ್ಯವಸ್ಥೆಯಲ್ಲಿ ವ್ಯತಿರಿಕ್ತ ಪರಿಣಾಮವಾಗಲಿ ಇರುವುದಿಲ್ಲ ಆದ್ದರಿಂದ ಗ್ರಾಮೀಣ ಜನರಲ್ಲಿ ಕಾಮಗಾರಿಗಳನ್ನು ಮಾಡಿಸಲು ಭ್ರಷ್ಟತೆಯ ವ್ಯವಸ್ಥೆಯಲ್ಲಿಯೇ ಸೋಮಾರಿತನ, ಅಸಡ್ಡೆ ಇದೆಯೆಂದು ಹೇಳಬಹುದು. ಆದ್ದರಿಂದ ಈ ರೀತಿಯ ಅಂಶಗಳು ಪ್ರಾಕ್ ಕಲ್ಪನೆಗೆ ವಿರುದ್ಧವಾದ ಫಲಿತಾಂಶವನ್ನೆ ನೀಡಿವೆ.

**ಸಂಶೋಧನಾ ಫಲಿತಗಳು**

- ಒಂದು ರಾಷ್ಟ್ರವು ಅಭಿವೃದ್ಧಿಯ ಪಥದಲ್ಲಿ ಸಾಗಬೇಕಾದರೆ ಹಲವು ಅಂಶಗಳು ನೆರವಾಗಬೇಕಾಗುತ್ತದೆ. ಸ್ವಾತಂತ್ರ್ಯ ನಂತರ ಕಲ್ಯಾಣ ರಾಜ್ಯದ ಕಡೆಗೆ ದೃಷ್ಠಿಮಾಡಿದ ಭಾರತ ಹಲವು ಯೋಜನೆಗಳ ಮುಖೇನ ಪ್ರಗತಿಯತ್ತ ಸಾಗಿತು, ಹಾಗೆಯೇ ನೂರಾರು ಯೋಜನೆಗಳು, ಸಾವಿರಾರು ಕೋಟಿ ಹಣವನ್ನು ಸಹ ವಿನಿಯೋಗಿಸಿರುವುದನ್ನು ಕಾಣಬಹುದು. ಯೋಜನೆಗಳು ಫಲಪ್ರದವಾಗಬೇಕಾದರೆ ಬರಿ ಹಣ ಒಂದೇ ಸಾಲದಾಗಿದ್ದು ರಾಷ್ಟ್ರದೊಳಗಿನ ಜನರ ಇಚ್ಛಾಶಕ್ತಿ, ನೈತಿಕತೆ, ನಿಷ್ಠೆ, ಪ್ರಾಮಾಣಿಕತೆ ಎಲ್ಲಾವು ಸಹ ಇರಬೇಕಾಗುತ್ತದೆ. ಆಗ ಮಾತ್ರ ಯೋಜನೆಗಳು ಶೇಕಡ 100ರಷ್ಟು ಫಲಿತಾಂಶ ನೀಡುತ್ತವೆ. ಭಾರತದಲ್ಲಿ ಮಾನವ ಸಂಪನ್ಮೂಲ ಅಧಿಕ ಪ್ರಮಾಣದಲ್ಲಿದ್ದು ಅದನ್ನು ಬಳಸಿಕೊಳ್ಳುವುದು ಸಹ ಅನಿವಾರ್ಯವಾಗಿದೆ, ಏಕೆಂದರೆ ವಿಶ್ವದಲ್ಲಿಯೇ ಎರಡನೆ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾದ ಭಾರತ ಎಲ್ಲಾ ಜನರಿಗೆ ಉದ್ಯೋಗ ಒದಗಿಸಿ ಕೊಡುವುದು ಆದ್ಯ ಕರ್ತವ್ಯವಾಗಿರುವುದು ಗಮನಾರ್ಹ ವಿಷಯವಾಗಿದೆ.
- ಭಾರತದಲ್ಲಿರುವ ನಿರುದ್ಯೋಗ ಪ್ರಮಾಣತೆಯೆಂಬುದು ಕೇವಲ ವಿದ್ಯಾವಂತ ವರ್ಗವಷ್ಟೆ ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿಯೂ ಇದೆ. ಗ್ರಾಮೀಣ ಭಾರತದಲ್ಲಿ ಕೃಷಿಯೇತರ ದಿನಮಾನಗಳಲ್ಲಿ ಉದ್ಯೋಗವೆ ಇಲ್ಲದೆ ಸಾಕಷ್ಟು ರೀತಿಯಲ್ಲಿ ಜೀವನ ನಿರ್ವಹಣೆ ಸಾಧ್ಯವಾಗದಿರುವುದನ್ನು ಕಾಣಬಹುದು. ಅದೇ ತೆರನಾಗಿ ಭಾರತದಲ್ಲಿನ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸಿ ಕೊಡುವ ನಿಟ್ಟಿನಲ್ಲಿ ಹಲವು ಯೋಜನೆಗಳಾದ ಜವಾಹರ್ ರೋಜ್‌ಗಾರ್ ಯೋಜನಾ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಇಂತಹ ನೂರಾರು ಯೋಜನೆಗಳನ್ನು ಜಾರಿಗೊಳಿಸಿತ್ತು. ಪ್ರತಿಯೊಂದು ಯೋಜನೆಗಳು ಸಹ ತಮ್ಮದೆಯಾದಂತಹ ಫಲಿತಾಂಶವನ್ನು ನೀಡಿವೆ. ಪ್ರಗತಿದಾಯಕ ಅಂಶಗಳು ಹಂತ ಹಂತವಾಗಿ ಕಾಲ ಕ್ರಮೇಣ ಅಂತಿಮ ಗುರಿಯನ್ನು ತಲುಪುತ್ತವೆ ಎಂಬುದನ್ನು ಗಮನಿಸಬಹುದು.
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಭಾರತದಾದ್ಯಂತ ಹರಡಿಕೊಂಡಿರುವ ಬೃಹತ್ ಯೋಜನೆಯಾಗಿದೆ. ಸಾವಿರಾರು ಕೋಟಿ ರೂ.ಗಳ ಯೋಜನೆಯಿದಾಗಿದ್ದು ಗ್ರಾಮೀಣ ಮಟ್ಟದಲ್ಲಿ ನಿರುದ್ಯೋಗ ನಿರ್ಮೂಲನೆಗೆ ಹಾಗೂ ಉದ್ಯೋಗದ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಗತಗೊಂಡಿರುವುದು ವಾಸ್ತವಾಂಶವಾಗಿದೆ. ಸಂಶೋಧನಾ ಉದ್ದೇಶದಿಂದ ಇದರಲ್ಲಿ ಒಂದು ಜಿಲ್ಲೆಯನ್ನು

ಆಯ್ಕೆ ಮಾಡಿಕೊಂಡು ಕ್ಷೇತ್ರಾಧ್ಯಯನದ ಮೂಲಕ ಯೋಜನೆಯ ಫಲಪ್ರದತೆಯ ಬಗ್ಗೆ ತಿಳಿದುಕೊಳ್ಳುವಂತಹ ಪ್ರಯತ್ನ ಮಾಡಲಾಗಿದೆ. ಜಿಲ್ಲೆಯಲ್ಲಿ 415 ಜನ ಫಲಾನುಭವಿಗಳನ್ನು ಸಂದರ್ಶಿಸಿದ ಸಂಧರ್ಭ 138 ಜನ ಸಕಾರಾತ್ಮಕವಾಗಿ ಮತ್ತು 277 ಜನರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಫಲಾನುಭವಿಗಳಲ್ಲದವರ ಸಂದರ್ಶನದಲ್ಲಿ 188 ಜನರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು 227 ಜನರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಇದರ ಜೊತೆಗೆ ವೃತ್ತಿನಿರತ ವರ್ಗದಲ್ಲಿ ಪಿ.ಡಿ.ಓ. ಮತ್ತು ಕಾರ್ಯದರ್ಶಿ ಶೇಕಡ 78.31% ಸಕಾರಾತ್ಮಕವಾಗಿ, ಕೇವಲ 21.68% ನಕಾರಾತ್ಮಕವಾಗಿ ಉತ್ತರಿಸಿದ್ದಾರೆ. ಹಾಗೆಯೇ ಪ್ರತಿನಿಧಿ ವರ್ಗದಲ್ಲಿ ಶೇಕಡ 49.39% ಸಕಾರಾತ್ಮಕವಾಗಿ ಶೇಕಡ 50.60 ನಕಾರಾತ್ಮಕವಾಗಿ ಪ್ರತಿಕ್ರಿಯಿಸಿರುವುದು ಗಮನಾರ್ಹವಾದ ಅಂಶವಾಗಿದೆ.

- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪೂರ್ಣತರವಾಗಿ ಅಧ್ಯಯನ ನಡೆಸಿದಾಗ ವಿಭಿನ್ನ ರೀತಿಯ ಫಲಿತವನ್ನು ಕಾಣಬಹುದು. ವಾಸ್ತವದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯು ದೇಶಾದ್ಯಂತ ಇರುವ ಯೋಜನೆಯಾಗಿದ್ದು ಸಾವಿರಾರು ಕೋಟಿ ರೂ.ಗಳಲ್ಲಿ ಕಾಮಗಾರಿಗಳು ನಡೆಯುವಂತದ್ದಾಗಿದೆ. ಇಂದಿನ ದಿನಗಳಲ್ಲಿ ತಂತ್ರಜ್ಞಾನ ಸಾಕಷ್ಟು ರೀತಿಯಾಗಿ ಮುಂದುವರೆದಿದ್ದು ಲೆಕ್ಕ ಪತ್ರಗಳೆಲ್ಲವು ಇ-ಆಡಳಿತದ ಮುಖೇನ ಕಡತಗಳನ್ನು ಸಂರಕ್ಷಿಸುವುದು ವಾಸ್ತವ ಸತ್ಯಾಂಶವಾಗಿದೆ. ಆ ನೆಲೆಯಲ್ಲಿ ಇದೊಂದು ಉತ್ತಮ ವಿಧಾನವೆನಿಸಿದರೂ ಅಂಕಿ ಅಂಶಗಳು ಕರಾರುವಾಕ್ಕಾಗಿ ಲೆಕ್ಕ ಪತ್ರಗಳಿಗೆ ಸರಿ ಹೊಂದಿದರೂ ಸಹ ಬಿಡುಗಡೆಯಾದಂತಹ ಹಣ ಸದ್ಬಳಕೆಯಾಗಿಲ್ಲವೆಂಬುದು ಸಂಶೋಧನೆಯಿಂದ ತಿಳಿಯುತ್ತದೆ. ಹಾಗೆಯೇ ಭ್ರಷ್ಟತೆಯ ಅಂಶಗಳು ಹೇರಳವಾಗಿಯೆ ದೊರೆಯುತ್ತವೆ. ಮಹಾತ್ಮಗಾಂಧಿ ನರೇಗಾ ಯೋಜನೆಯ ಮುಖ್ಯ ಉದ್ದೇಶ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸಿ ಕೊಡುವುದೆ ಆಗಿದೆ, ಆದರೆ ಇದ್ಯಾವುದೂ ಸಹ ಇಲ್ಲಿ ಸಂಪೂರ್ಣ ಫಲಿತಾಂಶ ನೀಡದೆ ಇರುವುದು ಗಮನಾರ್ಹವಾಗಿದೆ.
- ಮಹಾತ್ಮಗಾಂಧಿ ನರೇಗಾ ಯೋಜನೆ ಅಥವಾ ಕಾಯ್ದೆಯ ಸಿದ್ಧಾಂತವು ಒಂದೆಡೆಯಾದರೆ ವಾಸ್ತವವಾಗಿ ಭಾರತದಲ್ಲಿ ಅದರ ಪರಿಣಾಮ ಬೇರೆಯದೆ ಆಗಿದೆ ಎನ್ನಬಹುದು. ಮಹಾತ್ಮಗಾಂಧಿ ನರೇಗಾ ಯೋಜನೆಯ ಹಣ ಮಾತ್ರ ಸಂಪೂರ್ಣವಾಗಿ ಸದ್ಬಳಕೆಯಾಗಿದೆ, ಎಂಬುದು ಅಂಕಿ ಸಂಖ್ಯೆಗಳ ಮೂಲಕ ತಿಳಿಯಬಹುದು ಆದರೆ ಖಾತರಿ ಯೋಜನೆಯ ಹಣಕ್ಕಾಗಿ ಕಾಲ ಕಾಯುವುದನ್ನು ಸಹ ನೋಡಬಹುದು. ಲೆಕ್ಕ ಪತ್ರಗಳಲ್ಲಿ ಗ್ರಾಮೀಣ ಜನರೆಲ್ಲರೂ ಉದ್ಯೋಗಕ್ಕೆ ಹಾಜರಾಗಿದ್ದಾರೆ ಎಂದು ತಿಳಿಸುವ ಅಧಿಕಾರಿಗಳು ಒಂದೆಡೆಯಾದರೆ ಕಾಮಗಾರಿಗಳಿಗೆ ಹೋಗದೆ ಖಾಸಗಿ ಕೂಲಿಗಾಗಿ ಹೋಗುವ ಜನರು ಉದ್ಯೋಗ ಖಾತರಿ ಯೋಜನೆಯ ಬಗೆಗೆ ತಮ್ಮ ಬೇಸರವನ್ನು ವ್ಯಕ್ತಪಡಿಸುವಂತದ್ದು ಸಹ ಕಾಣಬಹುದು. ಸಂಶೋಧನಾ ಫಲಿತದಲ್ಲಿ ಇದಕ್ಕೆ ಅಧಿಕೃತವೆ ಅನಧಿಕೃತವೇ ಎಂದು ಉತ್ತರಿಸಲಾಗದಂತಹ ಸ್ಥಿತಿಯೆನ್ನಬಹುದು, ಏಕೆಂದರೆ ಗ್ರಾಮೀಣ ಜನರು ಖಾಸಗಿ ಉದ್ಯೋಗಕ್ಕೆ ಹೋಗುವುದರಿಂದ ಹೆಚ್ಚು ಕೂಲಿ ಸಿಗುತ್ತದೆ ಹಾಗೆಯೇ ಕೆಲಸಕ್ಕೆ ಹೋಗದೆ ಇದ್ದರೂ ಖಾತರಿ ಯೋಜನೆಯ ಹಣ ಬ್ಯಾಂಕ್ ಖಾತೆಗೆ ಬರುತ್ತದೆ. ಅದರಲ್ಲಿ ಪಂಚಾಯಿತಿ ಮತ್ತು ಇತರೆ ಅಧಿಕಾರಿಗಳಿಗೆ ಇಂತಿಷ್ಟು ನೀಡಿದರಾಯಿತು ಎಂಬ ಮನೋಸ್ಥಿತಿಗಳೆ ಹೆಚ್ಚಾಗಿವೆ.
- ಭಾರತ ಒಂದು ದೊಡ್ಡ ರಾಷ್ಟ್ರ ಇಲ್ಲಿ ಯೋಜನೆಗಳು ಸಫಲವಾಗುವುದು ಕಠಿಣವಾದಂತಹ ವಿಚಾರವೆ ಆಗಿದೆ. ಏಕೆಂದರೆ ಭಾರತವು ರಾಷ್ಟ್ರ ರಾಜ್ಯದ ಪರಿಕಲ್ಪನೆಯನ್ನು ಹೊಂದಿರದ ದೇಶವಾಗಿರುವುದರಿಂದ ಅಭಿವೃದ್ಧಿಯ ವಿಷಯದಲ್ಲಿ ದೇಶಾಭಿಮಾನವಾಗಲಿ, ರಾಷ್ಟ್ರಕ್ಕಾಗಿ ಸಮರ್ಪಣಾ ಭಾವವಾಗಲಿ ಇರುವುದಿಲ್ಲವಾದ್ದರಿಂದ ಇಲ್ಲಿನ ಯೋಜನೆಗಳಿಗೆ ಬಿಡುಗಡೆಯಾದಂತಹ ಸಂಪೂರ್ಣ ಹಣದಲ್ಲಿ ತನಗೆಷ್ಟು ಲಾಭವಾಗುತ್ತದೆ ಎಂದೇ ಪ್ರತಿಯೊಬ್ಬ ಅಧಿಕಾರಿಯೂ ಎದುರು ನೋಡುತ್ತಾರೆ. ಪ್ರತಿಯೊಬ್ಬ ಅಧಿಕಾರಿಯು ಸಹ ದೇಶದ ಅಭಿವೃದ್ಧಿಯ ವಿಚಾರದಲ್ಲಿ ದೇಶ ಮೊದಲು ಎನ್ನದೆ ತನ್ನ ಮನೆ, ಕುಟುಂಬ ಮೊದಲು ಆ ನಂತರ ದೇಶ ಎನ್ನುವ ಪರಿಕಲ್ಪನೆಯಿಂದ ಭ್ರಷ್ಟಾಚಾರತೆಯೆಂಬುದು ಹೆಚ್ಚಾಗಿ ಕಾಣುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳು ಇದಕ್ಕೆ ವಿರುದ್ಧವಾಗಿದ್ದು ದೇಶ ಮೊದಲು ಆ ನಂತರ ಕುಟುಂಬ ಎನ್ನುವುದರಿಂದ ಯೋಜನೆಗಳು ಸಂಪೂರ್ಣ ಯಶಸ್ವಿಗೊಳ್ಳುತ್ತವೆ.
- ದಾವಣಗೆರೆ ಜಿಲ್ಲೆಯಾದ್ಯಂತ ಮಹಾತ್ಮಗಾಂಧಿ ನರೇಗಾ ಯೋಜನೆಯು ಅನುಷ್ಠಾನತೆಯಲ್ಲಿ ಉತ್ತಮ ಯಶಸ್ಸನ್ನು ಗಳಿಸಿದೆ. ಇದಕ್ಕೆ ಪೂರಕವಾಗಿ ಅಭಿವೃದ್ಧಿ ಕಾಮಗಾರಿಗಳ ನಾಮಫಲಕ ಹಾಗೂ ಜನರು ಉದ್ಯೋಗದಲ್ಲಿ ಭಾಗವಹಿಸಿರುವ ಛಾಯಚಿತ್ರಗಳು ಮತ್ತು ಅಧಿಕೃತವಾದ ರಾಜ್ಯ ಸರ್ಕಾರದ ಜಾಲತಾಣದಲ್ಲಿನ ಅಂಕಿ-ಅಂಶಗಳು ಸಹ ಜಿಲ್ಲೆಯಾದ್ಯಂತ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ. ಸಂಶೋಧನಾ ಫಲಿತವು ಪ್ರಶ್ನಾವಳಿ ಅನುಸೂಚಿಯ ಆಧಾರಿತವಾಗಿ ಸಂಗ್ರಹಿಸಿದ ಮಾಹಿತಿಯು ಸಹ ತಾಳೆಯಾಗುವಂತಿದೆ, ಆದರೆ ಲೋಕಾಭಿರಾಮವಾಗಿ ಯೋಜನೆಯ ಬಗೆಗೆ ಜನರಲ್ಲಿ ಉತ್ತಮ ಪ್ರತಿಕ್ರಿಯೆಗಳ ಲಭ್ಯವಾಗದಿರುವುದನ್ನು ಸಹ ಗಮನಿಸಬಹುದಾಗಿದೆ.

**ಸಲಹೆಗಳು**

- ಮಹಾತ್ಮಗಾಂಧಿ ನರೇಗಾ ಯೋಜನೆಯು ಗ್ರಾಮೀಣ ಮಟ್ಟದ ಜನತೆಗೆ ಉದ್ಯೋಗ ಒದಗಿಸುವ ಉತ್ತಮ ಯೋಜನೆಯಾಗಿದ್ದು, ಕಾಮಗಾರಿಗಳು ಸಹ ಗ್ರಾಮೀಣ ಮಟ್ಟದಲ್ಲಿ ಪ್ರಗತಿದಾಯಕವಾದಂತಹ ಪರಿಣಾಮಗಳನ್ನೇ ಬೀರಿದ್ದು ಬರೀ ಶೌಚಾಲಯ, ಚೆಕ್ ಡ್ಯಾಂ, ರಸ್ತೆ ನಿರ್ಮಾಣ ಅಷ್ಟೆ ಅಲ್ಲದೆ ಹೊಸ ತೆರನಾದ ಕಾಮಗಾರಿಗಳನ್ನು ಅಳವಡಿಸಿದರೆ ಗ್ರಾಮಗಳಲ್ಲಿ ಸ್ವಚ್ಚತೆ, ಶಾಲೆಗಳಲ್ಲಿ ಹಸಿರುವನ ನಿರ್ಮಿಸುವುದು ಹೀಗೆ ಹಲವು ಕಾರ್ಯಕ್ರಮಗಳನ್ನು ಅಳವಡಿಸಿದರೆ ಒಳಿತಾಗುತ್ತದೆ.
- ಬಹುತೇಕವಾಗಿ ಯೋಜನೆಯ ಮುಖ್ಯ ಉದ್ದೇಶ ಗ್ರಾಮೀಣ ಜನತೆಗೆ ಉದ್ಯೋಗ ಒದಗಿಸುವುದು, ಆದರೆ ಖಾಸಗಿ ಕೆಲಸಗಳಲ್ಲಿಯೇ ದಿನಗೂಲಿ ಹೆಚ್ಚಾಗಿರುವಾಗ ಉದ್ಯೋಗ ಖಾತರಿ ಯೋಜನೆ ಕಡಿಮೆ ಕೂಲಿಗಾಗಿ ಬರಲು ಯಾರು ಸಹ ಸಿದ್ಧವಿರುವುದಿಲ್ಲ. ಈ ನಿಟ್ಟಿನಲ್ಲಿ ಉದ್ಯೋಗ ಖಾತರಿ ಯೋಜನೆಯ ದಿನಗೂಲಿಯು ಆಯಾ ಸ್ಥಳದಲ್ಲಿನ ಖಾಸಗಿ

ಕೂಲಿದರಕ್ಕಿಂತ ಹೆಚ್ಚಿದ್ದರೆ ಹೆಚ್ಚು ಜನರು ಬರುವ ಸಾಧ್ಯತೆಯಿದೆ.

- ಮಹಾತ್ಮಗಾಂಧಿ ನರೇಗಾ ಯೋಜನೆಯ ಮತ್ತೊಂದು ವಿಫಲತೆಯೆಂದರೆ ಜನರಿಗೆ ಇದರ ಬಗೆಗೆ ಸಂಪೂರ್ಣ ಮಾಹಿತಿಯ ಕೊರತೆಯಿದ್ದು, ಯಂತ್ರಗಳ ಬಳಕೆ ಮಾಡಿದರು ಸುಮ್ಮನೆ ನೋಡುವಂತಾಗಿದೆ. ಆದ್ದರಿಂದ ಸಂಪೂರ್ಣವಾಗಿ ಮಾಹಿತಿಯು ತಿಳಿಯುವಂತೆ ಖಾತರಿ ಯೋಜನೆಯ ಬಗೆಗೆ ದೂರದರ್ಶನ, ಪತ್ರಿಕೆ ಹಾಗೂ ಇತರೆ ಸಮೂಹ ಮಾಧ್ಯಮಗಳನ್ನು ಹೆಚ್ಚಾಗಿ ಬಳಸಿಕೊಳ್ಳುವುದು ಅವಶ್ಯವಾಗಿದೆ.
- ಭಾರತದಲ್ಲಿ ಯೋಜನೆಗಳು ಶೇಕಡ ನೂರರಷ್ಟು ಯಶಸ್ವಿಯಾಗದಿರಲು ಕಾರಣ ಇದೊಂದು ರಾಷ್ಟ್ರ–ರಾಜ್ಯದ ಪರಿಕಲ್ಪನೆಯಿಲ್ಲದಿರುವ ರಾಷ್ಟ್ರವಾಗಿರುವುದರಿಂದ ಭ್ರಷ್ಟಾಚಾರ ಹೆಚ್ಚಾಗಿ ನಡೆಯುತ್ತದೆ. ಆದ್ದರಿಂದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿ ವತಿಯಿಂದ ಸಾಮಾಜಿಕ ಜಾಲತಾಣಗಳ ಮುಖೇನ ಮಾಹಿತಿಯನ್ನು ಹೆಚ್ಚು ಅಳವಡಿಸುವುದರಿಂದ ಗ್ರಾಮದ ಯುವಕರು ಮತ್ತು ಸ್ಥಳಿಯರಿಗೆ ಪಂಚಾಯಿತಿಯ ಲೆಕ್ಕ ಪತ್ರಗಳ ಬಗೆಗೆ ಪಾರದರ್ಶಕವಾಗಿ ತಿಳಿಯುವಂತಾಗಿ ಇದರಲ್ಲಿ ಕುಟುಂಬದವರಿಗೂ ಅವಕಾಶ ಕಲ್ಪಿಸಿಕೊಳ್ಳಬಹುದೆಂಬ ಆಶಾಭಾವನೆ ಹೆಚ್ಚುತ್ತದೆ.
- ಗ್ರಾಮ ಪಂಚಾಯಿತಿಯಲ್ಲಿನ ಅಧಿಕಾರಿಗಳು ಮತ್ತು ಪ್ರತಿನಿಧಿ ವರ್ಗವು ಕೆಲವೇ ಕೆಲವು ಜನರನ್ನು ಮಾತ್ರ ಆಯ್ಕೆ ಮಾಡಿಕೊಂಡು ಅವರ ಖಾತೆಗಳಿಗೆ ಹಣ ಜಮೆ ಮಾಡಿ ಭ್ರಷ್ಟಾಚಾರ ನಡೆಸಲು ಸಾಧ್ಯತೆಯಿದ್ದು, ಪಂಚಾಯಿತಿಯ ಸೂಚನಾ ಫಲಕದಲ್ಲಿ ಕಾಮಗಾರಿಗಳಲ್ಲಿನ ರೊಟೇಷನ್ ಪದ್ಧತಿಯ ಪ್ರಕಾರ, ಇಲ್ಲವೆ ಒಂದೇ ಭಾರಿ ಹಲವು ಕಾಮಗಾರಿಗಳನ್ನು ಪ್ರಾರಂಭಿಸಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ಮಾಡಬೇಕಾಗಿದೆ.
- ಖಾತರಿ ಯೋಜನೆಯಲ್ಲಿ ಒಂದು ದಿನ ಮಾತ್ರ ಭಾಗವಹಿಸಿ ಉಳಿದ ದಿನದ ಕಾಮಗಾರಿಗಳನ್ನು ಯಂತ್ರಗಳಿಂದ ಮಾಡಿಸಲಾಗುತ್ತದೆ. ಇದನ್ನು ತಪ್ಪಿಸಲು ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯಗೊಳಿಸಬೇಕು. ಬಯೋಮೆಟ್ರಿಕ್ ತಾಂತ್ರಿಕವಾಗಿ ಕಾರ್ಯನಿರ್ವಹಿಸದ ದಿನ ಕೆಲಸವನ್ನು ಸ್ಥಗಿತಗೊಳಿಸಿದರೆ ಯೋಜನೆಯು ಬಹುತೇಕ ಯಶಸ್ವಿಯಾಗುವುದು.
- ಕಾಮಗಾರಿಗಳು ನಡೆಯುವ ಸ್ಥಳಗಳನ್ನು ವಿಕ್ಷೀಸುವ ಒಂಬಡ್ಸಮನ್ ಅಧಿಕಾರಿಗಳು ಭ್ರಷ್ಟಾಚಾರತೆಯಲ್ಲಿ ತೊಡಗಿದರೆ, ಅಥವಾ ಪಂಚಾಯಿತಿ ಅಧಿಕಾರಿಗಳು ಭ್ರಷ್ಟತೆಯಲ್ಲಿ ತೊಡಗಿದ್ದರೆ ತುಂಬಾ ಕಠಿಣವಾದಂತಹ ಕ್ರಮ ಕೈಗೊಳ್ಳುವುದರ ಜೊತೆಗೆ ಅಂತಹ ಭ್ರಷ್ಟತೆಯನ್ನು ಬಯಲಿಗೆಳೆಯುವಂತವರನ್ನು ಸರ್ಕಾರದಿಂದ ಪುರಸ್ಕಾರ, ಸನ್ಮಾನ ಹಾಗೂ ನಗದು ಹಣವನ್ನು ನೀಡಿದರೆ ಭ್ರಷ್ಟಾಚಾರ ನಡೆಯುವಂತದ್ದನ್ನು ತಡೆಯಬಹುದು.
- ಖಾತರಿ ಯೋಜನೆಯ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವೊತ್ತೂ ಕೂಲಿ ಹಣ ಬಿಡುಗಡೆ ಮಾಡಿದರೆ ಅದರ ಬಗೆಗಿನ ಆಸಕ್ತಿ ಕಡಿಮಡಯಾಗಿ ಖಾಸಗಿ ಕೆಲಸಗಳಿಗೆ ಮುಖ ಮಾಡುತ್ತಾರೆ ಆದ್ದರಿಂದ ಕಾಲ ಕಾಲಕ್ಕೆ ಹಣವನ್ನು ಜಮೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

**ಉಪಸಂಹಾರ:–** ನಿರುದ್ಯೋಗ ಸಮಸ್ಯೆ ಭಾರತಕ್ಕೆ ಹೊಸದೇನಲ್ಲ ಸ್ವತಂತ್ರ ನಂತರದ ದಿನಗಳಲ್ಲಿ ಜನಸಂಖ್ಯೆಯೆಂಬುದು ಅಧಿಕವಾಯಿತು, ಇದು ಆಗ ತಾನೆ ಸ್ವತಂತ್ರಗಳಿಸಿದ ಭಾರತಕ್ಕೆ ಸ್ವಯಂ ಸರ್ಕಾರ ರಚಿಸಿಕೊಂಡು ಎಲ್ಲವನ್ನು ನಿಭಾಯಿಸುವುದು ಕಷ್ಟ ಸಾಧ್ಯವಾಗಿತ್ತು. ಭಾರತ ಸರ್ಕಾರವು ಹಲವಾರು ರೀತಿಯ ಹೊಸ ಹೊಸ ಯೋಜನೆಗಳ ಮುಖೇನ ಭಾರತದಲ್ಲಿ ಬಡತನ, ನಿರುದ್ಯೋಗ, ವಸತಿ, ಆಹಾರ ಹೀಗೆ ಹಲವಾರು ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನಿರತವಾಗಿರುವುದು ಇತಿಹಾಸದಿಂದ ತಿಳಿದು ಬರುತ್ತದೆ.ಇದಕ್ಕೆ ಪೂರಕವಾಗಿ ಹಲವಾರು ಯೋಜನೆಗಳನ್ನು ಸಹ ಭಾರತ ಸರ್ಕಾರ ಜಾರಿಗೊಳಿಸಿದೆ. ಸ್ವಾತಂತ್ರ್ಯ ಭಾರತದಲ್ಲಿ ನಿರುದ್ಯೋಗವೆಂಬುದು ಒಂದು ಸಾಮಾಜಿಕ ಪಿಡುಗಿನಂತೆಯೇ ಕಾಡತೊಡಗಿದೆ. ಇದು ಒಂದು ತೆರನಾಗಿ ಮಾನವ ಸಂಪನ್ಮೂಲವೆಂಬುದು ಹೇರಳವಾಗಿ ದೊರೆಯುವ ರಾಷ್ಟ್ರದಲ್ಲಿ ಅದನ್ನು ಸಮಗ್ರವಾಗಿ ಬಳಸಿಕೊಳ್ಳುವಲ್ಲಿ ವಿಫಲವಾಗಿದೆ. ಹಾಗೆಯೇ ಅಷ್ಟು ಜನಕ್ಕೆ ಉದ್ಯೋಗ ಒದಗಿಸುವಂತಹದ್ದು ಸಹ ಆರ್ಥಿಕವಾಗಿ ದುರ್ಬಲವಾಗಿದ್ದಂತಹ ಸಂಧರ್ಭದಲ್ಲಿ ಕಷ್ಟ ಸಾಧ್ಯವೆನ್ನಬಹುದು.

ಭಾರತ ಸರ್ಕಾರ ಸ್ವತಂತ್ರ ನಂತರ ದಿನಗಳಲ್ಲಿ ನಿರುದ್ಯೋಗ ನಿರ್ಮೂಲನೆಗಾಗಿ ನೂರಾರು ಯೋಜನೆಗಳನ್ನು ಕೈಗೊಂಡಿರುವುದು ಗಮನಾರ್ಹ ವಿಷಯವಾಗಿದೆ. ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ, ಬರಪೀಡಿತ ಪ್ರದೇಶ ಕಾರ್ಯಕ್ರಮ, ಸ್ವಯಂ ಉದ್ಯೋಗ ತರಬೇತಿ, ಜವಹಾರ್ ರೋಜ್‌ಗಾರ್ ಯೋಜನೆ, ವಿದೇಶಗಳಲ್ಲಿ ಉದ್ಯೋಗ, ನೆಹರು ರೋಜ್‌ಗಾರ್ ಯೋಜನೆ, ಇನ್ನು ಅನೇಕ ಯೋಜನೆಗಳು ನಿರುದ್ಯೋಗ ನಿರ್ಮೂಲನೆಯಲ್ಲಿ ತಮ್ಮದೇ ಆದ ಕಾರ್ಯ ನಿರ್ವಹಿಸಿವೆ. ಇತ್ತೀಚಿನ ದಿನಗಳಲ್ಲಿ ಅದರಲ್ಲೂ 21ನೆ ಶತಮಾನದ ಕಾಲದಲ್ಲಿ ಜನಸಂಖ್ಯೆ ಹೆಚ್ಚಾಗಿರುವ ಭಾರತದಲ್ಲಿ ನಿರುದ್ಯೋಗದ ಪ್ರಮಾಣವನ್ನು ತಗ್ಗಿಸಲು ವಿಶೇಷ ಕ್ರಮಗಳನ್ನೆ ಕೈಗೊಳ್ಳಲಾಗುತ್ತಿದೆ. 2005ರಲ್ಲಿ ಜಾರಿಯಾದಂತಹ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಬಹುಪಾಲು ಗ್ರಾಮೀಣ ಜನತೆ ಕೃಷಿಯೇತರ ದಿನಮಾನಗಳಲ್ಲಿ ಮನೆಯಲ್ಲಿ ಖಾಲಿ ಕೂರುವುದಕ್ಕೆ ಬಿಡದೆ ಉದ್ಯೋಗ ಒದಗಿಸಿ ಸದೃಡ ಗ್ರಾಮಗಳ ನಿರ್ಮಾಣಕ್ಕೆ ಅಡಿಪಾಯವಾಗಿದೆ. ಇದರಿಂದ ಬಹುತೇಕವಾಗಿ ಹಳ್ಳಿಗಳ ರಾಷ್ಟ್ರವಾಗಿರುವ ಭಾರತಕ್ಕೆ ನಿರುದ್ಯೋಗ ಪ್ರಮಾಣವನ್ನು ತಗ್ಗಿಸಲು ಶೇಕಡ 75% ಅನುಕೂಲವಾಯಿತು ಎನ್ನಬಹುದು. ಭಾರತದ ಈ ಹೊಸ ಯೋಜನೆಯು ಹಂತ ಹಂತವಾಗಿ ದೇಶದ ಎಲ್ಲೆಡೆ ಉತ್ತಮ ಕಾಮಗಾರಿಗಳನ್ನು ನಿರ್ಮಾಣದಲ್ಲಿ ತೊಡಗಿದ್ದು ಗ್ರಾಮೀಣ ಜನರಿಗೆ ಉದ್ಯೋಗವನ್ನು ಸಹ ಒದಗಿಸಿದಂತಾಗಿದೆ.

ಒಟ್ಟಾರೆಯಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಉತ್ತಮವಾದ ಯೋಜನೆಯೆನ್ನಲು ಯಾವುದೆ ಅನುಮಾನವಿಲ್ಲ, ಆದರೆ ಆಡಳಿತ್ಮಾತಕ ಮತ್ತು ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಯೋಜನೆಯು ಪಾರದರ್ಶಕವಾಗಿ ಮತ್ತು ಭ್ರಷ್ಟತೆ ರಹಿತವಾಗಿ ಸಫಲವಾಗುವಂತದ್ದು, ಕಷ್ಟದಾಯಕವಾಗಿದ್ದು, ಆಡಳಿತದಲ್ಲಿ ಕಟ್ಟು ನಿಟ್ಟಿನ ಕಾನೂನುಗಳು ಹಾಗೂ ಗ್ರಾಮೀಣ ಜನತೆಯಲ್ಲಿ ಯೋಜನೆಯ ಬಗೆಗೆ ಸಮಗ್ರವಾದ ಮಾಹಿತಿ ಹಾಗೂ ಜಾಗೃತಿಯನ್ನು ಮೂಡಿಸಿದಲ್ಲಿ ಇದೊಂದು ಉತ್ತಮ ಯೋಜನೆಯೆಂದೇ ಹೇಳಬಹುದು. ಬಹುತೇಕ ಗ್ರಾಮಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಹೆಚ್ಚಾಗಿಯೇ ಇದ್ದು, ಕಾಮಗಾರಿಗಳ ಮೂಲಕ ಅವುಗಳನ್ನು

ಪೂರ್ಣಗೊಳಿಸಿ ಗ್ರಾಮದ ಜನರನ್ನು ಸಹ ನಿರುದ್ಯೋಗದ ಅಂಶಗಳಿಂದ ದೂರವಾಗಿಸಿ ಉದ್ಯೋಗ ಒದಗಿಸುವಂತಹದ್ದು ರಾಷ್ಟ್ರದ ಅಭಿವೃದ್ಧಿಯ ಪ್ರತೀಕವಾಗುತ್ತದೆ.

**ಗ್ರಂಥಋಣ**


1. Spardha Vijaya. Panchayath Development Officer, Cambridge publishing, Bangalore, 2011, 78-93.
2. Krishnaswamy OR. Methodology of Research in Social Sciences, Himalaya publishing, Mumbai, 2007, 22-30.
3. Wilkinson, Bhandarkar. Methodolagy and Techniques of Social Research Himalaya publishing, Mumbai, 2009, 53-62.
4. ನಾರಾಯಣ. ಎಂ, 2001, "ಸಾಮಾಜಿಕ ಸಂಶೋಧನಾ ವಿಧಾನ" ಲಕ್ಷ್ಮಿ ಪ್ರಿಂಟಿಂಗ್, ಮೈಸೂರು ಪು.ಸಂ 105.
5. ಪ್ರಭಾಕರ್‌ಶರ್ಮ ಎಸ್.ಎ. 2013, "ನಿಮ್ಮನೆಯಲ್ಲಿ ಟಾಯ್ಲೆಟ್ ಇಲ್ಲವೇ? ಕಟ್ಟಿಕೊಳ್ಳಲು ಸರ್ಕಾರ ಹಣ ನೀಡುತ್ತದೆ," ಉದಯವಾಣಿ, ಅಕ್ಟೋಬರ್ 10, ಪು.ಸಂ 06.
6. ಚಂದ್ರಶೇಖರ್ ಕೆ, 2009, "ಅಭಿವೃದ್ಧಿ ಪಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು", ಅಹನ ಪಬ್ಲಿಕೇಷನ್ಸ್, ಬೆಂಗಳೂರು, ಪು.ಸಂ322
7. ಕಲಕೇರಿ, ಬಸವರಾಜ ಹಳ್ಳೂರ, 2011, "ಕೆಪಿಎಸ್‌ಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
8. ಇಲಾಖೆಯ ಅಭಿವೃದ್ಧಿ ಅಧಿಕಾರಿಗಳ ಪರೀಕ್ಷೆಗಾಗಿ," ಹಳ್ಳೂರ ಪ್ರಕಾಶನ, ಬೆಂಗಳೂರು, ಪು.ಸಂ 317–318
9. ಜಯಪಾಲರೆಡ್ಡಿ, ಬಿ.ಸಿ. ಸಂಪಾದಕರು, ಕರ್ನಾಟಕ ವಿಕಾಸ, ಮಾಸಪತ್ರಿಕೆ, ಜುಲೈ2008, ಕನ್ನಡ ಪ್ರಕಾಶನ ವಿಭಾಗ, ಬೆಂಗಳೂರು ಪು.ಸಂ 16–19
10. ಕರ್ನಾಟಕ ರಾಜ್ಯಪತ್ರ, 2008, "ಮಾಹಿತಿ ಹಕ್ಕು ಖಾಯಿದೆ," ಕರ್ನಾಟಕ ಪ್ರಕಾಶನ, ಕೋರಮಂಗಲ.
11. ಕೃಷ್ಣಮೂರ್ತಿ ಹೆಚ್.ಆರ್, 2006, "ಭಾರತದ ಆರ್ಥಿಕತೆ" ಸಪ್ನ ಬುಕ್‌ಹೌಸ್, ಬೆಂಗಳೂರು.
12. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಕರ್ನಾಟಕ, 2005, "ಸಾಮಾಜಿಕ ಲೆಕ್ಕ ಪರಿಶೀಲನೆ," ಕರ್ನಾಟಕ ಪ್ರಕಾಶನ ವಿಭಾಗ, ಬೆಂಗಳೂರು, ಪು.ಸಂ 16–19.
13. ಗಿರಿಜ, ಟಿ. 2001. ದಾವಣಗೆರೆ: ಇದು ನಮ್ಮ ಜಿಲ್ಲೆ. ನಿಹಾರಿಕಾ ಒಪ್ರಕಾಶನ, ಪುಟ. 10–13.
14. en.wikipedia.org/wiki/mahatma_Gandhi_National_Rural_Employment_Gurantee_Act
15. Nerga.nic.in/Karnataka_unemp_rules.pdf
16. en.wikipedia.org/wiki/Davanagere.